ಶ್ರೀ ಕೆ. ಯೆಂಕಟಪ್ಪ,—ಸ್ವಾಮಿ ವಿರೋಧ ಪಕ್ಷದವರು ಗದ್ದಲ ಮಾಡುತ್ತಿರುವುದನ್ನು ನೋಡಿದರೆ ನಾವು ಅಸೆಂಬ್ಲಿಯಲ್ಲಿ ಮಾತನಾಡಬಾರದು ಎಂದು ಕಾಣುತ್ತದೆ.

SRI P. RAMDEV.—I take strong objections, Sir, to the use of the word "GADDALA"

ಅಧ್ಯಕ್ಷರು.—ಅನಾವಶ್ಯಕವಾಗಿ ರಿಮಾರ್ಕ್ಸ್ ಮಾಡುವುದು ಬೇಡ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ ಮಾನ್ಯ ಸದಸ್ಯರಿಗೆ ಗಂಟೆಗಟ್ಟಲೇ ಮಾತನಾಡಲು ಅವಕಾಶಕೊಡಿ ಬೇಡವೆಂದು ಹೇಳುವುದಿಲ್ಲ. ಅವರು ಗಂಟೆ ಗಟ್ಟಲೆ ಮಾತನಾಡಲಿ ಆದರೆ ವಿರೋಧ ಪಕ್ಷದವರು ಗದ್ದಲ ಮಾಡುತ್ತಿದ್ದಾರೆ ಎಂದು ಹೇಳುವ ಮಾತು ಸರಿಯಲ್ಲವೆಂದು ಹೇಳುತ್ತೇನೆ.

ಶ್ರೀ ಕೆ. ಯೆಂಕಟಪ್ಪ.—ರೂಲ್ ನಂ ೩೧೨ರ ಪ್ರಕಾರ ನಾನು ಒಂದು ನೋಟೀಸ್ ಕಳುಹಿಸಿಕೊಟ್ಟಿದ್ದೇನೆ.

MR. SPEAKER.—Under what rule and regarding what subject-matter are you speaking ?

ಶ್ರೀ ಯೆಂಕಟಪ್ಪ.—ಮೆ ೨೦ನೇ ತಾರೀಖಿನ ತಾಲ್ಲೂಕ್ ಬೋರ್ಡ್ ಎಲೆಕ್ಷನ್ ಇದೆ. ಅದರ ಬಗ್ಗೆ ಮಾತನಾಡಬೇಕೆಂದಿದ್ದೇನೆ.

ಅಧ್ಯಕ್ಷರು.—ಅದನ್ನು ಬೆಳಿಗ್ಗೆ ನೋಡುತ್ತೇನೆ. ದಯವಿಟ್ಟು ತಾವು ಈಗ ಕುಳಿತುಕೊಳ್ಳಿ.

Notice of an adjournment motion.

re : Demolition of a harijan house in Yelahanka near Bangalore.

ಶ್ರೀ ವೈ. ರಾಮಕೃಷ್ಣ. —ಸ್ವಾಮಿ ನಾನು ಈಗ ಒಂದು ನಿಲುವಳಿ ಸೂಚನೆ ಮೋಷನ್ ಕಳುಹಿಸಿಕೊಟ್ಟಿದ್ದೇನೆ, ಅದು ಈ ರೀತಿ ಇರುತ್ತದೆ. "We the undersigned members give notice under Rule 50 of the Rules of Procedure and Conduct of Business of the Karnataka Legislature Assembly that this House stands adjourned to discuss the following matter of urgent public importance.....

ಅಧ್ಯಕ್ಷರು.—ನಿಲುವಳಿ ಸೂಚನೆ ಮಂಡನೆ ಮಾಡಲು ನಾನು ಅವಕಾಶ ಕೊಟ್ಟಿಲ್ಲ.

ಶ್ರೀ ವೈ. ರಾಮಕೃಷ್ಣ.—ಅದಕ್ಕೆ ಅವಕಾಶ ಕೊಡಿ ಎಂದು ಕೇಳುವುದಕ್ಕಾಗಿಯೇ ನಾನು ನಿಂತಿದ್ದೇನೆ ಸ್ವಾಮಿ. ಮಾನ್ಯ ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು.—ಅದರ ಹಿನ್ನೆಲೆಯನ್ನು ಹೇಳಿ ಓದಬೇಡಿ.

ಶ್ರೀ ವೈ. ರಾಮಕೃಷ್ಣ.—ಇಲ್ಲಿ ನಾನು ತೀವ್ರವಾದ ಆಪಾದನೆಯನ್ನು ವ್ಯಕ್ತಪಡಿಸುವುದೇನೆಂದರೆ ಮಂತ್ರಿಮಂಡಲದಲ್ಲಿ ಸದಸ್ಯರಾಗಿರತಕ್ಕಂಥ ಶ್ರೀಮಾನ್ ಬಸವಲಿಂಗಪ್ಪನವರ ಮೇಲೆ ಮಾಡುತ್ತಿದ್ದೇನೆ. ಅದು ಅವರು ಮಂತ್ರಿಗಳಾಗಿ ಅವರು ಮಾಡಿರುವ ಕೆಲಸ ಹಾಗೂ ವೈಯುಕ್ತಿಕವಾಗಿ ಅವರ ವಿರುದ್ಧ ನಿಂತುಕೊಂಡಿದ್ದ ಮಾರಪ್ಪ ಎಂಬ ಹರಿಜನ ಒಬ್ಬನ ಮೇಲೆ ಸೇಡು ತೀರಿಸಿಕೊಳ್ಳುತಕ್ಕಂಥ ಕೃಮವೆಂದು ನಾನು ಈ ಒಂದು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ. ನಾನು ಈಗ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ನಿಲುವಳಿ ಸೂಚನೆ ಚರ್ಚೆಗೆ ಬಂದಾಗ ತಾವು ದಯವಿಟ್ಟು ಮಾನ್ಯ ಕಂದಾಯ ಮಂತ್ರಿಗಳನ್ನು ಬರಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಗೌವರ್ನರ್ ಅಡ್ರಸ್ ಮೇಲೆ ಮಾತನಾಡತಕ್ಕಂಥ ಸಂದರ್ಭವಿರುತ್ತದೆ, ಚರ್ಚೆ ಮಾಡತಕ್ಕಂಥ ಸಂದರ್ಭ ಬರುತ್ತದೆ ಆಗಾಗ ತಾವು ಮಾತನಾಡಬಹುದು.

ಶ್ರೀ ವೈ. ರಾಮಕೃಷ್ಣ.—ಯಾರ ಹತ್ತಿರ ಮಾತನಾಡಬೇಕು ಸ್ವಾಮಿ.

MR. SPEAKER.—I will request the Hon'ble Minister to be present, to note and answer.

ಶ್ರೀ ವೈ. ರಾಮಕೃಷ್ಣ.—ಮಂತ್ರಿಗಳಾಗಿ ಮಾಡಿರತಕ್ಕಂಥಾದ್ದು ಅರ್ಧ ಇದ್ದರೆ, ವೈಯಕ್ತಿಕವಾಗಿ ಚುನಾವಣೆಯ ಸಂದರ್ಭದಲ್ಲಿ ಮಾರಪ್ಪ ಎಂಬಾತನ ಮೇಲೆ ಮಾಡಿರತಕ್ಕಂಥ ಕೃತ್ಯ ಅರ್ಧವಾಗಿರುತ್ತದೆ.

ಶ್ರೀ ಕೆ. ಪ್ರಭಾಕರ್.—ಹೆಸರು ಹೇಳುವುದು ಬೇಡವೆಂದು ಹೇಳುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಏತಕ್ಕೆ ಹೇಳಿವುದು ಬೇಡ ಎಂದು ಹೇಳುತ್ತೀರಿ ?

ಅಧ್ಯಕ್ಷರು.—ಏತಕ್ಕೆ ಅಷ್ಟು ಅವಸರ ಪಡುತ್ತೀರಿ ? 'ಅವಸರ ಪಡುವುದು ಬೇಡವೆಂದು ಹೇಳುತ್ತೇನೆ'. ಸಮಾಧಾನವಾಗಿ ಮಾತನಾಡಿ.

ಶ್ರೀ ಎಸ್. ಬಂಗಾರಪ್ಪ.—Point of order. ಸ್ವಾಮಿ ಮಾನ್ಯ ಪ್ರಭಾಕರ್‌ರವರು ಹೇಳಿದ ಹಾಗೆ ನಮ್ಮ ಕಾರ್ಯಕಲಾಪಗಳಿಗೆ ಸಂಬಂಧಪಟ್ಟಹಾಗೆ, ಮಂತ್ರಿ ನಿಯಮಾವಳಿಯ ಪ್ರಕಾರ ಮಾನ್ಯ ಸದಸ್ಯರ ಮೇಲೆ ಹೇಳತಕ್ಕಂಥಾದ್ದು, ಮತ್ತು ಒಬ್ಬ ವ್ಯಕ್ತಿಯ ಹೆಸರನ್ನು ಹೇಳಬಾರದು ಎಂದು ಇದುತ್ತದೆ. ಮಾನ್ಯ ಪ್ರಭಾಕರ್‌ರವರು ಅಬ್‌ಜಕ್ಷನ ತೆಗೆದುಕೊಂಡಿರುವುದು ರೂಲ್ ಪ್ರಕಾರವಾಗಿ ಇರುತ್ತದೆ.

SRI Y. RAMAKRISHNA.—He is a victim.

ಶ್ರೀ ಎಸ್. ಬಂಗಾರಪ್ಪ.—ರೂಲ್ ಪ್ರಕಾರವಾಗಿ ಹೇಳಬೇಕು.

SRI J. H. PATEL.—Please quote the rule which forbids a member from saying it.

ಶ್ರೀ ಎಸ್. ಬಂಗಾರಪ್ಪ.—ಈ ರೀತಿ ಇದ್ದರೆ ತಾವು ಅದಕ್ಕೆ ಕಾರಣವನ್ನು ಕೊಟ್ಟು ಹೇಳಿದರೆ ಮಾನ್ಯ ಸದಸ್ಯರಿಗೆಲ್ಲ ಗೊತ್ತಾಗುತ್ತದೆ. ಆದರೆ ಅವರನ್ನು ಒಂದು ಸಾರಿ ಹೆದರಿಸುವ ಧಾಟಿಯಲ್ಲಿ ಹೇಳಿದರಲ್ಲ ಅದು ಬೇಡ ಅಂತ ನಾನು ಹೇಳುತ್ತೇನೆ. ಏಕೆಂದರೆ ಆ ರೀತಿ ಹೇಳಿದರೆ ಇಲ್ಲಿ ತಕರಾರು ಬರುತ್ತದೆ ಅಂತ ಅಷ್ಟೆ.

ಅಧ್ಯಕ್ಷರು.—ಮಾನ್ಯ ರಾಮಕೃಷ್ಣರವರೇ, ಸ್ವಲ್ಪ ಶಾಂತಿಯಿಂದ ಹೇಳಿ. ಅವರು ನಿಮ್ಮನ್ನು ಉದ್ರೇಕ ಮಾಡಿದರೂ ನೀವು ಉದ್ರೇಕರಾಗಬಾರದು.

ಶ್ರೀ ವೈ. ರಾಮಕೃಷ್ಣ.—ಅವರು ನನ್ನನ್ನು ಉದ್ರೇಕ ಮಾಡಿದರೂ ನಾನು ಉದ್ರೇಕನಾಗುವುದಿಲ್ಲ. ಆದರೆ ನನ್ನ ವಿಷಯ ಏನು ಅಂತ ಅವರು ಪೂರ್ತಿಯಾಗಿ ಕೇಳಬೇಕು. If I tell the truth, I hope they will also appreciate the stand that I have taken. ಮೊನ್ನೆ ತಾನೇ ಮಾನ್ಯ ಮುಖ್ಯಮಂತ್ರಿಯವರು ಹೇಳುತ್ತಿದ್ದರು, ಏನೆಂದರೆ "ನಾನು ಹರಿಜನರ ವಿಷಯದಲ್ಲಿ ಕಳಕಳಿಯಿಂದ ಇದ್ದೇನೆ. ಹರಿಜನರ ಹಿತರಕ್ಷಣೆಯ ಕಾರ್ಯವನ್ನು ಗುತ್ತಿಗೆಗೆ ತೆಗೆದುಕೊಂಡಿದ್ದೇನೆ. ನಾನು ಊದಿದಂಥ ತುತ್ತೂರಿ ಕಿವಿಗೆ ಇಂಪಾಗಿತ್ತು. ಅದನ್ನು ಕೇಳಿ ಅವರು ಯಾವ ರೀತಿ ಓಟು ಕೊಟ್ಟರೋ ಆ ಓಟಿನಿಂದ ನಮ್ಮ ಸರ್ಕಾರ ರಚನೆ ಮಾಡಿದ್ದು" ಹಾಗೆಂದು ಅವರು ಹೇಳುತ್ತಿದ್ದರು, ಆದರೆ.....

ಶ್ರೀ ಐ. ಪಿ. ಡಿ. ಸಾಲಪ್ಪ.—ತುತ್ತೂರಿ ಕಿವಿಗೆ ಇಂಪಾಗಿತ್ತು, ಟಮಟೆ ಬಾರಿಸಿದವರು ಎಂದು ಮಾನ್ಯ ಸದಸ್ಯರು ಹೇಳಬಾರದು. ಅವರು ಸರಿಯಾಗಿ ಮಾತನಾಡಬೇಕು.

(ಈ ಸಮಯದಲ್ಲಿ ೪ ಜನ ಒಟ್ಟಿಗೆ ಎದ್ದು ನಿಂತರು)

ಅಧ್ಯಕ್ಷರು.—ದಯವಿಟ್ಟು ಕುಳಿತುಕೊಳ್ಳಿ, ಹೀಗೆ ಒಂದೇ ಸಾರಿ ೪ ಜನ ಮಾತನಾಡಿದರೆ ಹೇಗೆ ?

ಶ್ರೀ ಮಳ್ಳೂರ್ ಆನಂದರಾವ್.—ಈಗ ಆರ್ಡರ್ ಆಫ್ ದಿ ಹೌಸ್ ಅದೇ ಆಗಿದೆ. ಆ ಕಡೆ ಳ ಜನ ಎದ್ದು ನಿಂತು ಮಾತನಾಡಿದರೆ ನಾವು ಹೇಗೆ ಸುಮ್ಮನೆ ಕುಳಿತುಕೊಳ್ಳುವುದು ? ಆಗ ನಾವೂ ಮಾತ ನಾಡಬೇಕಾಗುತ್ತದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಮಾನ್ಯ ಸದಸ್ಯರು ಏನಾದರೂ ಹೇಳುವುದಿದ್ದರೆ ನೇರವಾಗಿ ಹೇಳಲಿ. ಉದಾಹರಣೆ ಕೊಟ್ಟು ಅವರು ಹಾಗೆ ಹೇಳಿದರು, ಇವರು ಹೀಗೆ ಹೇಳಿದರು ಎಂದು ಏತಕ್ಕೆ ಹೇಳುತ್ತಿದ್ದಾರೆ ?

SRI Y. RAMAKRISHNA.—I seek no instructions from hon'ble Members.

SRI M. C. NANAIAH.—I rise to a point of order. The hon'ble Member has given a notice of Adjournment Motion. Now he has detailed out the reasons warranting the Hon'ble Speaker to give consent. This is an Adjournment Motion which concerns the Minister *i.e.*, the acts of a Minister. Therefore, when the Notice of Adjournment Motion itself makes out a case against a Minister, I would like to know whether the Hon'ble Speaker has given his consent to him to move the motion. When the Hon'ble Speaker has not given the consent, then the question of raising preliminary issue in the matter of this type does not arise. He has given the notice of Adjournment Motion and he has detailed out certain things. I know where there are interpretation of rules, the member shall have the right to impress upon the Hon'ble Speaker about the admissibility. As far as this particular adjournment motion is concerned, he has given it and it does not require any interpretation of the rule. The Hon'ble Speaker can go through the Motion and he may give or withhold consent. In the name of preliminary statement, he is trying to make the main statement.

SRI S. R. BOMMAI.—I am very sorry because my hon'ble Friend Sri Naniah is a very intelligent Advocate and whenever there is an adjournment motion before the House he always repeats his argument on points of orders. I request him to go through the conventions of this House. Just to persuade the Chair to give consent, the member who has given the notice of adjournment motion has a right to make preliminary remarks. That is the convention of this House. I would like to bring to the notice of the hon'ble Member that some of the members who are now occupying treasury benches, and who are Ministers, have argued on the admissibility of adjournment motion four to five hours, in this House previously. We sat till mid-night on some occasions. If you go through the Proceedings of the House, you will understand it. Only on one adjournment motion, we had to sit till mid night just to convince the Chair about its admissibility. Now, he is not taking hours or days. Therefore, please allow him to speak and convince the Chair about the admissibility of the adjourn

ment motion. If you go on raising point of order every time, then, most of our time will be consumed by that. If you had not raised the point of orders, by this time he would have finished the preliminary statement.

ಅಧ್ಯಕ್ಷರು.—ಮಾನ್ಯ ರಾಮಕೃಷ್ಣ ಅವರೇ ತಾವು ಈ ಬಗ್ಗೆ ಸಂಕ್ಷೇಪವಾಗಿ ವಿಚಾರ ಹೇಳಿದರೆ ಸಾಕು.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ನಾನು ತಂದಿರುವ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಇಲ್ಲಿ ಅಲೋ ಮಾಡುವುದಕ್ಕಾಗಿ ನಾನು ತಮ್ಮ ಅಪ್ಪಣೆಯನ್ನು ಬೇಡುತ್ತಿದ್ದೇನೆ. ನಾನು ಮೊದಲೇ ಹೇಳಿದಂತೆ ಇದರಲ್ಲಿ ಅಡಗಿರತಕ್ಕಂಥ ಪ್ರಶ್ನೆ ಏನು ಎಂಬುದನ್ನು ನಾನು ತಮ್ಮ ಮುಂದೆ ಇಟ್ಟಿದ್ದೇನೆ. ಮಾನ್ಯಮಂತ್ರಿಯವರಾದ ಬಸವಲಿಂಗಪ್ಪನವರು ಅವರ ವಿರುದ್ಧವಾಗಿ ನಿಂತಿದ್ದ ಒಬ್ಬ ಅಭ್ಯರ್ಥಿಯ ಮನೆಗೆ ನುಗ್ಗಿ ಮನೆ ಹೊಡೆಸಿರುವುದು ನ್ಯಾಯವೇ ಎಂಬುದನ್ನು ತಾವೇ ವಿಚಾರ ಮಾಡಿ. ಇದು ಯಾರಿಗಾದರೂ ಸಿಟ್ಟು ತರಿಸತಕ್ಕಂಥ ಕ್ರಮವಲ್ಲವೇ ಎಂದು ಕೇಳುತ್ತೇನೆ. ಹರಿಜನರ ಓಟನ್ನು ತೆಗೆದುಕೊಂಡು ಬಂದು ಈ ರಾಜ್ಯವನ್ನು ಆಳುತ್ತಿದ್ದಾರೆ. ಪಾಪ ಹರಿಜನರು ಪ್ರತಿದಿನ ಭಗವಂತನ ಸ್ಮರಣೆ ಮಾಡಿಕೊಂಡು ಬದುಕುತ್ತಿದ್ದಾರೆ. ಅಂತಹವರ ಮನೆಗೆ ನುಗ್ಗಿ ಮನೆ ಹೊಡೆಸಿರತಕ್ಕ ನಮ್ಮ ಮಾನ್ಯ ಮಂತ್ರಿಯವರ ಪ್ರವೃತ್ತಿಯನ್ನು ಯಾವ ರೀತಿ ಪ್ರಶ್ನೆ ಮಾಡಬೇಕೆಂಬುದನ್ನು ತಾವು ಹೇಳಿ.

ಶ್ರೀ ಐ. ಪಿ. ಡಿ. ಸಾಲಪ್ಪ.—ಪಾಯಿಂಟ್ ಆಫ್ ಆರ್ಡರ್. ನಮ್ಮ ಮಾನ್ಯ ರಾಮಕೃಷ್ಣ ಅವರು, ಸನ್ಮಾನ್ಯ ಬಸವಲಿಂಗಪ್ಪನವರು ತನ್ನ ವಿರುದ್ಧ ನಿಂತ ಅಭ್ಯರ್ಥಿಯಾದ ಮಾರಪ್ಪನವರ ಮನೆ ನುಗ್ಗಿ ಮನೆ ಹೊಡೆಸಿದರು ಎಂದು ಹೇಳಿದರು. ಆದಕ್ಕೆ ಏನಾದರೂ ದಾಖಲೆ ಇದೆಯೇ ?

(ಈ ಸಮಯದಲ್ಲಿ ೪–೫ ಜನ ಮಾನ್ಯಸದಸ್ಯರು ಎದ್ದು ನಿಂತು ಮಾತನಾಡುವುದಕ್ಕೆ ಶುರು ಮಾಡಿದರು)

ಅಧ್ಯಕ್ಷರು.—ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಅವರು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಐ. ಪಿ. ಡಿ. ಸಾಲಪ್ಪ.—ಮಾನ್ಯ ಮಂತ್ರಿಗಳಾದ ಬಸವಲಿಂಗಪ್ಪನವರು ಮಾರಪ್ಪನವರ ಮನೆ ನುಗ್ಗಿ ಮನೆ ಹೊಡೆಸಿದರು ಎಂದು ಸನ್ಮಾನ್ಯ ಸದಸ್ಯರಾದ ರಾಮಕೃಷ್ಣ ಅವರು ಆಪಾದನೆ ಮಾಡುತ್ತಿದ್ದಾರೆ. ಹರಿಜನರ ಮೇಲೆ ಯಾರೇ ಹಲ್ಲೆ ಮಾಡಿದರೂ ಪ್ರತಿಯೊಬ್ಬರಿಗೂ ಖೇದವಾಗುತ್ತದೆ ಮತ್ತು ದುಃಖವಾಗುತ್ತದೆ. ಆದರೆ ಮಾನ್ಯಸದಸ್ಯರು ಶ್ರೀ ಬಸವಲಿಂಗಪ್ಪನವರು ಅವರ ಮನೆ ಹೊಡೆಸಿದ್ದಾರೆ ಎಂದು ಏನು ಹೇಳಿದ್ದಾರೆ ಅದನ್ನು ಅವರು ರುಜುವಾತು ಮಾಡಬೇಕು. ಇಲ್ಲದಿದ್ದರೆ ಅವರು ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ಮಳ್ಳೂರ್ ಆನಂದರಾವ್.—ಮಾನ್ಯ ಅಧ್ಯಕ್ಷರೇ, ಆ ಕಡೆಯಿಂದ ಮಾನ್ಯ ಸದಸ್ಯರು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಅದರ ಮೇಲೆ ಭಾಷಣ ಮಾಡಬಹುದು. ಆದರೆ ನಾವು ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿ ಮಾತನಾಡುವುದಕ್ಕೆ ಹೋದರೆ ತಾವು ರೂಲಿಂಗ್ ಕೊಡುತ್ತೀರಿ.

ಅಧ್ಯಕ್ಷರು.—ತಾವು ಪಾಯಿಂಟ್ ಆಫ್ ಆರ್ಡರ್ ಹೇಳಿದ್ದೇ ಇಲ್ಲವಲ್ಲ. ಹೀಗೆ ಮಾತನಾಡಿ ಈ ಮನೆಯ ಕಾಲವನ್ನು ಕಳೆಯುತ್ತಿದ್ದೀರಿ. ಮಾನ್ಯ ಸದಸ್ಯರು ಈ ರೀತಿ ಮಾತನಾಡಿ ಸಭೆಯ ಕಾಲವನ್ನು ಕಳೆಯಬೇಡಿ ದಯಮಾಡಿ ಕುಳಿತುಕೊಳ್ಳಿ.

3-00 P. M.

ಶ್ರೀ ವೈ. ರಾಮಕೃಷ್ಣ.—ಮಾನ್ಯ ಸಾಲಪ್ಪನವರು ನಾನು ಹೇಳಿದ್ದನ್ನು ಸುಳ್ಳು ಎಂದು ಹೇಳುತ್ತಿದ್ದಾರೆ. ದಯಮಾಡಿ ಅದನ್ನು ಅವರು ವಾಪಸ್ ತೆಗೆದುಕೊಳ್ಳಬೇಕು.

ಶ್ರೀ ಐ. ಪಿ. ಡಿ. ಸಾಲಪ್ಪ.—ಮಾನ್ಯ ಅಧ್ಯಕ್ಷರೇ, ಸುಳ್ಳು ಎಂದು ಅಲ್ಲ ಅದು ಸತ್ಯಕ್ಕೆ ದೂರವಾದುದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

SRI K. PUTTASWAMY.—Sir, the point before you is about giving consent to the adjournment motion. You will heve to examine whether this adjournment motion fulfills all the requirements of Rule 52. of you are satisfied with the requirements of rule 52 then, you may have to consider giving your consent for the motion being moved. Sir according to the notice that has been tabled that this incident which is reported to have happened on 18th of last month *ie.*, a fortnight back. Sir, according to the motion it is stated that the House belonging to one Sri Marappa who has been living in that House for the past 11 years has been demolished at the instance of a Minister. I only repeat what is contained in the motion. Sir it is the demolition of a house of a family which was living in that house for the past 11 years and carrying on business apart from living therein and having no shelter the family consisting of 11 children with mother and father were thrown to streets. It is further stated that.....

(Interruption by Sri Bhaskar Shetty)

SRI K. PUTTASWAMY.—Sir, I am sorry if the Hon. Member Sri Bhaskar Shetty cannot understand the question. I cannot help in that field. Sir, I am only impressing on that motion that it is matter of urgent public importance & it is of a recent occurrence. This matter is of a public importance and we should find out whether there has been any official excesses; whether it has been wantonly done. It is a matter that pertains to a family consisting of 13 members and they have been in the streets. I am only trying to impress on you just to satisfy all the requirements of rule 52. It is for you to ponder over whether you have to give consent or not. If you are pleased to give consent than the motion will be taken up and it will be discussed on merits. Sir, I would like you to kindly read the motion and especially when there is a allegation made on the Hon. Minister, it becomes all the more important that it should be discussed and it should not be deferred even for discussion tomorrow. Because it is very urgent

ಶ್ರೀ ಎಸ್. ಬಂಗಾರಪ್ಪ (ಲೋಕೋಪಯೋಗಿ ಇಲಾಖೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರಾದ ಪುಟ್ಟಸ್ವಾಮಿಯವರು ಬಹಳ ದೀರ್ಘಕಾಲದಿಂದ ಈ ಸಭೆಯಲ್ಲಿ ಸದಸ್ಯರಾಗಿ ಇದ್ದವರು ಹಾಗೂ ಮಂತ್ರಿಗಳಾಗಿ ಸಾಕಷ್ಟು ಅನುಭವ ಇರುವಂತಹವರು ಅವರು ಮಾತನಾಡುತ್ತಿದ್ದಾರೆ, ಅದು ಯಾವ ರೂಲ್ ಪ್ರಕಾರ ಮಾತನಾಡುತ್ತಿದ್ದಾರೆಂದು ಗೊತ್ತಾಗಲಿಲ್ಲ. ಈ ವಿಷಯ ಹಿನ್ನಲೆಯಲ್ಲಿ ಇರುವುದನ್ನೆಲ್ಲಾ ಮಾತನಾಡುತ್ತಿದ್ದಾರೆ ಇದು ಯಾವ ರೂಲ್ ಪ್ರಕಾರ ? ಚರಿತ್ರೆಯನ್ನೆಲ್ಲಾ ಹೇಳ್ತಿದ್ದಾರೆ. ಇದನ್ನು ಯಾವ ರೀತಿ ಅಮೆಂಟ್ ಮಾಡಲಿಕ್ಕೆ ಬರುತ್ತದೆಂದು ನಾನು ತಿಳಿಯಬಯಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ೧೦ ಜನರು ಸೇರಿ ನಿಲುವಳಿ ಸೂಚನೆ ಕಳುಹಿಸಿದ್ದಾರೆ. ಅದನ್ನು ಒಪ್ಪಲಿಕ್ಕೆ ಯಾವರೀತಿಯಿಂದ ಬರುತ್ತದೆಂದು ತಿಳಿಸುವುದಕ್ಕೆ ಮಾತನಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಪುಟ್ಟಸ್ವಾಮಿಯವರು ನಿಯಮಾವಳಿ ೫೨ರ ಪ್ರಕಾರ ಕೆಲವು ಶರತ್ತುಗಳನ್ನು ಪ್ರಸ್ತಾಪಮಾಡಿದ್ದಾರೆ. ಒಂದು ದಿವಸದಲ್ಲಿ ಇದು ಪ್ರಸ್ತಾಪಕ್ಕೆ ಬರಬೇಕು. ಇದು ಇತ್ತೀಚೆಗೆ ನಡೆದಂತಹ ಘಟನೆಯಾಗಿರಬೇಕು. ವಿಷಯ ಬಹಳ ಪ್ರಾಮುಖ್ಯವಾದದ್ದು ಇರಬೇಕು ಎಂದು

ಅವರು ಪ್ರಸ್ತಾಪಮಾಡಿದ್ದಾರೆ ರೂಲ್ ೫೨ರ ಪ್ರಕಾರ ಕೆಲವು ಶರತ್ತುಗಳು ಏನು ಇವೆ ಅವುಗಳನ್ನು ಸ್ಯಾಟಿಸ್‌ಫೈ ಮಾಡಿದರೆ ಆಮೇಲೆ ಆ ನಿರ್ಣಯವನ್ನು ಮಂಡನೆಮಾಡುವುದಕ್ಕೆ ಅವಕಾಶ ಕೊಡಬೇಕಾಗುತ್ತದೆ. ಇಲ್ಲದೆ ಹೋದರೆ ಇದೇ ರೀತಿ ಅನೇಕ ಘಟನೆಗಳು ಸಾಮಾನ್ಯವಾಗಿ ನಡೆಯುತ್ತಿರುತ್ತವೆ. ಅವಕ್ಕೆಲ್ಲಾ ಅಡ್‌ಜರ್ನ್‌ಮೆಂಟ್ ಮೋಷನ್ ಮೂವ್ ಮಾಡುವುದಾದರೆ ಆಗ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಮಾನ್ಯ ವಿರೋಧಪಕ್ಷದ ನಾಯಕರಿಗೆ ಹಾಗೂ ನನ್ನ ಮಿತ್ರರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ ಆರೀತಿ ಏನಾದರೂ ದುರ್ಘಟನೆ ನಡೆದಿದ್ದೇ ಆದರೆ ಅದು ಸರಿಯೆಂದು ಯಾರು ಹೇಳುವುದಕ್ಕೆಆಗುವುದಿಲ್ಲ. ಜೊತೆಗೆಯಾರಿಗೇ ಅನ್ಯಾಯವಾಗಿರಲಿ ಅದು ಅನ್ಯಾಯವೇ ಎಂದು ತಿರ್ಮಾನಿಸಬೇಕಾಗುತ್ತದೆ. ಅನ್ಯಾಯ ಮಾಡಿದವರು ಯಾರೇ ಆಗಿರಲಿ ಅವರ ಮೇಲೆ ಕಾನೂನು ಚೌಕಟ್ಟಿನಲ್ಲಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಈ ವಿಷಯದಲ್ಲಿ ಸರ್ಕಾರದ ಜೊತೆಸಹಕರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಆದರೆ ಮಾನ್ಯ ಅಧ್ಯಕ್ಷರಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ ನಮ್ಮ ಕಾನೂನಿನಪ್ರಕಾರ ಇದನ್ನು ಅಡ್‌ಜರ್ನ್‌ಮೆಂಟ್ ಮೋಷನ್ ಎಂದು ಮೂವ್ ಮಾಡುವುದಕ್ಕೆ ಅರ್ಹತೆ ಪಡೆಯುತ್ತದೆಯೇ ಎಂದು ನನಗೆ ಅನ್ನಿಸುವುದಿಲ್ಲ. ಈಗ ಏನು ಮಾನ್ಯ ಸದಸ್ಯರು ಘಟನೆಯ ಬಗ್ಗೆ ಹೇಳಿದ್ದಾರೆ ಆದರ ಬಗ್ಗೆ ಏನಾದರೂದೂರು ನೀಡಿದ್ದಾರೆಂದು ಗೊತ್ತಿಲ್ಲ. ದೂರು ನೀಡಿದ್ದರೂ ಮಾನ್ಯ ಸದಸ್ಯರು ಏನುಹೇಳಿದ್ದಾರೆ ಆದರ ಮೇಲೆ ವಿಚಾರಣೆ ನಡೆಸಿ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಂದು ಮಾನ್ಯ ರಾಮಕೃಷ್ಣ ಅವರಿಗೂ ಮತ್ತು ಮಾನ್ಯ ವಿರೋದಪಕ್ಷದ ಸದಸ್ಯರೆಲ್ಲರಲ್ಲೂ ವಿನಂತಿಮಾಡಿಕೊಳ್ಳುತ್ತೇನೆ. ಆದ್ದರಿಂದ ಈ ವಿಷಯವನ್ನು ಅಡ್‌ಜರ್ನ್‌ಮೆಂಟ್ ಮೋಷನ್ ಮುಖಾಂತರ ಎಲ್ಲಾ ಕಾರ್ಯಕಲಾಪಗಳನ್ನು ಬದಿಗಿರಿಸಿ ತೆಗೆದುಕೊಳ್ಳುವುದಾದರೆ ಇದು ಒಳ್ಳೆಯ ಸಂಪ್ರದಾಯ ಹಾಕಿದಂತೆ ಆಗುವುದಿಲ್ಲವೆಂದು ಕಾಣುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರು ತೀರ್ಮಾನಕ್ಕೆ ಬರುವ ಮೊದಲು ಈ ವಿಷಯವನ್ನು ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದವತಿಯಿಂದ ನಾನು ಹೇಳುವುದಿಷ್ಟೆ. ಈಗ ನಡೆಸಿರತಕ್ಕಂಥ ಘಟನೆಯಲ್ಲಿ ಯಾರೇ ತಪ್ಪಿತಸ್ಥರಿರಲಿ ಒಬ್ಬ ವ್ಯಕ್ತಿಯೇ ಇರಲಿ ಒಂದು ಸಂಸ್ಥೆಯೇ ಇರಲಿ ಅದು ತಪ್ಪು ಎಂದು ಭಾವಿಸಬೇಕಾಗುತ್ತದೆ ಆದ್ದರಿಂದ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುವುದರಲ್ಲಿ ಹಿಂದೆ ಸರಿಯುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ವೈ. ರಾಮಕೃಷ್ಣ.— ಕರ್ನಾಟಕದ ಇತಿಹಾಸದಲ್ಲಿ ಇಂತಹ ಘಟನೆ ಇಲ್ಲಿಯವರೆಗೆ ನಡೆದಿಲ್ಲ ಮುಂದೆ ನಡೆಯುವುದಿಲ್ಲವೆಂದು ಹೇಳುತ್ತೇನೆ. ಒಬ್ಬ ಮಂತ್ರಿಯಾದವರು ಅವರ ವಿರುದ್ಧ ಸ್ಪರ್ಧಿಸಿದವರ ಮೇಲೆ ಅವರು ಮಂತ್ರಿಗಳಾದ ಮೇಲೆ ಈ ರೀತಿ ಮನೆ ಹೊಡಿಸಿ ಅವರ ಮೇಲೆ ಸೇಡನ್ನು ತೀರಿಸಿಕೊಳ್ಳುವುದನ್ನು ಪ್ರತಿದಿನ ನಡೆಯುವ ಘಟನೆಯಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಇದು ಮಂತ್ರಿಗಳಿಗೆ ಸಂಬಂಧಪಟ್ಟ ಹಾಗೆ ಹೇಳತಕ್ಕ ವಿಷಯವಲ್ಲ ಖಾಸಗಿ ಸದಸ್ಯರಿಗೂ ಕೂಡ ಯಾವ ರೀತಿಯಿಂದಲಾದರೂ ನೋವಾದರೆ, ಅದನ್ನು ನಾವು ಖಂಡಿಸಬೇಕಾಗುತ್ತದೆ ಮತ್ತು ಇದನ್ನು ನಾವೆಲ್ಲರೂ ಒಪ್ಪುತ್ತೇವೆ. ನಾನು ತಮ್ಮ ಅವಗಾಹನೆಗೆ ಇಷ್ಟೆ, ನಿಯಮಾವಳಿಯ ಪ್ರಕಾರ ಇದಕ್ಕೆ ಪ್ರಾಮುಖ್ಯತೆ ಇಲ್ಲ ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಪ್ರತಿನಿತ್ಯವೂ ನಾವು ನಿಲುವಳಿ ಸೂಚನೆಯನ್ನು ಅಂಗೀಕಾರ ಮಾಡಿಕೊಳ್ಳುತ್ತಾ ಹೋದರೆ ಅದು ಸರಿಯಾಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಇದು ರಾಜಕೀಯ ಸಿಗ್ನಿಫಿಕೆನ್ಸ್‌ನ್ನು ಹೊಂದಿದೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇದರ ಬಗ್ಗೆ ಸಾಕಷ್ಟು ವಿಷಯ ಹೇಳಿದ್ದೇನೆ, ಮತ್ತು ನಾವು ಏನು ಕ್ರಮತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಅದರಂತೆ ಸೂಕ್ತ ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆಂದು ಮಾನ್ಯ ವಿರೋಧಪಕ್ಷದ ಮಿತ್ರರಿಗೆ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ. ಈ ಎಲ್ಲಾ ದೃಷ್ಟಿಯಿಂದಲೂ ತಂದಿರತಕ್ಕ ಅಡ್ಜರ್ನ್‌ಮೆಂಟ್ ಮೋಷನ್ ಮೂವ್ ಮಾಡುವುದಕ್ಕೆ ಮತ್ತು ಅದಕ್ಕೆ ಒಪ್ಪಿಗೆ ಕೊಡುವುದಕ್ಕೆ ಸಕಾರಣಗಳು ಏನೂ ಕಂಡುಬಂದಿಲ್ಲ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ರಾಮಕೃಷ್ಣ ಅವರು ಈ ವಿಚಾರವನ್ನು ಸೂಕ್ತವಾಗಿ ನೋಡುತ್ತಾರೆ ಮತ್ತು ಹೆಚ್ಚಿನ ವಿಚಾರಗಳನ್ನು ಸರ್ಕಾರಕ್ಕೆ ಬಿಡಿ ಎಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವೈ ರಾಮಕೃಷ್ಣ.—ಇದಕ್ಕೆ ಸಂಬಂಧಪಟ್ಟ ಫೋಟೋಗಳನ್ನು ತಮಗೆ ಕಳುಹಿಸಿಕೊಡುತ್ತೇನೆ. ಎಷ್ಟು ಸಾವಿರ ರೂಪಾಯಿಗಳ ನಷ್ಟವನ್ನು ಇವರು ಆ ವ್ಯಕ್ತಿಗೆ ಮಾಡಿದ್ದಾರೆ ಎನ್ನುವುದನ್ನು ತಾವು ನೋಡಬೇಕು. ಪಸ್ಸೊಂದು ಮಕ್ಕಳ ತಂದೆಯ ಮನೆಯನ್ನು ಒಡೆದು ಹಾಕುವುದು ಎಂದರೆ ಅದು ಸುಲಭದ ವಿಚಾರವಿಲ್ಲ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಮಾನ್ಯ ವಿರೋಧಪಕ್ಷದವರು ಇವತ್ತು ಅಡ್ಜರ್ನ್‌ಮೆಂಟ್ ಮೋಷನ್ ಅನ್ನು ಮಾನ್ಯ ಬಸವಲಿಂಗಪ್ಪನವರ ಮೇಲೆ ತಂದಿದ್ದಾರೆ. ಆದರ ಬಗ್ಗೆ ನಾನು ಹೇಳ ಬೇಕಾದ್ದನ್ನು ನಾನು ಹೇಳಬೇಕಾಗಿದೆ. ನಮ್ಮ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಅವರ ಪಾರ್ಟಿಯಿಂದ ಒಬ್ಬ ಹೆಣ್ಣುಮಗಳನ್ನು ನಿಲ್ಲಿಸಿ ಆಕೆ ನಾಮಿನೇಷನ್ ಫೈಲ್ ಮಾಡುವುದಕ್ಕೆ ಬಂದಾಗ ಏನು ಮಾಡಿದರು ಎಂದು ಅವರಿಗೆ ಗೊತ್ತಿದೆ. ಈಗ ಆ ಮನುಷ್ಯರು ಇಲ್ಲಿ ಅಡ್ಜರ್ನ್‌ಮೆಂಟ್ ಮೋಷನ್ ತರುವುದಕ್ಕೆ ನೋಡು ತ್ತಿದ್ದಾರೆ.

ಶ್ರೀ ಮಳ್ಳೂರು ಆನಂದರಾವ್. —ಮಾನ್ಯ ಸದಸ್ಯರು ಬೇರೆ ವಿಷಯ ಮಾತನಾಡಿ, ವಿಷಯಕ್ಕೆ ಬೇರೆ ರೂಪ ಕೊಡುತ್ತಿದ್ದಾರೆ.

ಶ್ರೀಮತಿ ರೇಣುಕಾ ರಾಜೇಂದ್ರನ್.—ಮಾನ್ಯ ಬಸವಲಿಂಗಪ್ಪನವರು ಅವರ ಮನೆಯನ್ನು ಒಡೆ ಸಿದರು ಏನ್ನುವುದು ನಿಜಾಂಶವಾಗಿದ್ದರೆ ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರ ಬಗ್ಗೆ ಸೂಕ್ತ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆ ನಮ್ಮ ಪಕ್ಷದ ಅಭ್ಯರ್ಥಿ ನಾಮಿನೇಷನ್ ಫೈಲ್ ಮಾಡಿದ ಮೇಲೆ ಅವರು ಏನು ಮಾಡಿದರು ? ಇವರು ತಮ್ಮ ಪಕ್ಷದ ವತಿಯಿಂದ ಶ್ರೀಮತಿ ಪ್ರಭಾವತಿ ಏನ್ನುವವರ ಹೆಸರನ್ನು ಅನೌನ್ಸ್ ಮಾಡಿದರು.

ಶ್ರೀ ಮಳ್ಳೂರು ಆನಂದರಾವ್.—ಮಾನ್ಯ ಸದಸ್ಯರಿಯವರು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಸಂಬಂಧಪಟ್ಟ ವಿಚಾರ ಹೇಳಬೇಕು. ಅವರು ತಮ್ಮ ಕ್ಷೇತ್ರದ ಇನ್ನೊಂದು ಘಟನೆಯ ಬಗ್ಗೆ ಹೇಳುತಿದ್ದಾರೆ ಅದಕ್ಕೆ ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಈ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಸಂಬಂಧಪಟ್ಟಹಾಗೆ ಏನು ಹೇಳ ಬೇಕೋ ಅದನ್ನು ನಾನು ಹೇಳಿದ್ದೇನೆ. ಕಾನೂನು ಪ್ರಕಾರ ಅದು ಅಡ್ಮಿಟ್ ಆಗಲಿಕ್ಕೆ ಸಾಕಷ್ಟು ಕಾರಣ ಗಳು ಇವೆ. ರೂಲ್ ೫೨ರಲ್ಲಿ, ತಮಗೆ ನಾನು ಹೇಳಿದ ವಿಚಾರಗಳನ್ನು ಪರಿಶೀಲಿಸಿ ಇದನ್ನು ಅಡ್ಮಿಟ್ ಮಾಡುವುದಕ್ಕೆ ಇಲ್ಲವೆ ರಿಜಕ್ಟ್ ಮಾಡುವುದಕ್ಕೆ ಅಧಿಕಾರ ಇದೆ. ಇದು ಪಬ್ಲಿಕ್ ಇಂಪಾರ್ಟೆನ್ಸ್ ಇರುವ ವಿಷಯವಾದ್ದರಿಂದ ಇದನ್ನು ನಾನು ಇಲ್ಲಿ ಮೂವ್ ಮಾಡಿದ್ದೇನೆ. ಇದರ ಜೊತೆಗೆ, ಯಾವ ಯಾವ ರೀತಿಯಿಂದ ಈ ವಿಷಯ ಅಡ್ಮಿಟ್ ಆಗಲಿಕ್ಕೆ ಅರ್ಹತೆಯನ್ನು ಪಡೆದಿದೆ ಎನ್ನುವುದನ್ನು ನಾನು ಓದಬೇಕಾ ಗುತ್ತದೆ. ರೂಲ್ ೫೨ (೧)ರ ಪ್ರಕಾರ, ವಿಷಯ ನಿರ್ವಿವಾದವಾಗಿದೆ.

ಅಧ್ಯಕ್ಷರು.—ನಾನು ರೂಲ್ಸನ್ನು ಓದಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ನಾನು ಇನ್ನು ಎರಡೇ ಎರಡು ವಾಕ್ಯಗಳನ್ನು ಮಾತ್ರ ಹೇಳುತ್ತೇನೆ. ಮಾನ್ಯ ಮಂತ್ರಿಗಳು ಮಾಡಿರತಕ್ಕ ಕೆಲಸ ಕಾನೂನು ಬದ್ಧವಾಗಿದೆಯೋ ಇಲ್ಲವೇ ಎನ್ನುವುದನ್ನು ನಾವು ನೋಡಬೇಕು. ಅವರು ಜನತಾ ಪಾರ್ಟಿಯ ವರ್ಕರ್ ಎಂದೂ ಮತ್ತು ಅವರು ತಮ್ಮ ವಿರುದ್ಧವಾಗಿ ನಿಂತಿದ್ದ ವ್ಯಕ್ತಿ ಎಂದು ತಿಳಿದು ಇಂಥ ಕ್ರಮ ಇವರ ಮೇಲೆ ತೆಗೆದುಕೊಂಡಿದ್ದಾರೆ. ಆದರೂ ಗಂಡ ಹೆಂಡತಿ ಇಬ್ಬರೂ ರಾತ್ರಿ ೯–೩೦ ಗಂಟೆಯಲ್ಲಿ ಮಾನ್ಯ ಮಂತ್ರಿಗಳನ್ನು ಇವರ ಮನೆಯಲ್ಲಿ ಭೇಟಿ ಮಾಡಿ ದಾಗ ಅವರ ಬಾಯಲ್ಲಿ ಬಂದಂಥ ಮಾತು ಏನು ಸ್ವಾಮಿ ? ನೀವು ಜನತಾ ಪಾರ್ಟಿಯವರನ್ನು ಕರೆದು ಕೊಂಡು ಬಂದು ಸರಿ ಮಾಡಿಕೊಳ್ಳಿ ಹೋಗಿ ಎಂದು ಹೇಳಿದ್ದಾರೆ. ಜನತಾ ಪಕ್ಷದ ಸದಸ್ಯರು ಈ ರಾಜ್ಯದ ಪ್ರಜೆಗಳು ಅಲ್ಲವೇ ? ಅವರು ಬೇರೆ ಸೆಕ್ಷನ್ ಸಿಟಿಸನ್ಸ್ ಎಂದು ಟ್ರೀಟ್ ಮಾಡುತ್ತೀರಾ ಎಂದು ನಾನು ಕೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ವಿಷಯಕ್ಕೆ ಪ್ರಾಮುಖ್ಯತೆ ಕೊಟ್ಟು ಮಾಡಬೇಕು.

ಶ್ರೀ ವೈ. ರಾಮಕೃಷ್ಣ.—ರೂಲ್ ೫೨ರ ಪ್ರಕಾರ ನಾನು ಕಳುಹಿಸಿರತಕ್ಕ ನಿಲುವಳಿ ಸೂಚನೆ ಕ್ರಮ ಬದ್ಧವಾಗಿದೆ, ತಾವು ನನಗೆ ದಯವಿಟ್ಟು ಅದನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕೊಡ ಬೇಕು.

SRI B. BASAVALINGAPPA (Minister for Revenue).—Sir, the hon. Member Sri Y. Ramakrishna has made so many allegations against me. I do not know what has made him make those allegations. He was making those allegations as if he has personally heard them. I do not know who that man is; I have not seen his face at all. I therefore fail to understand how Sri Y. Ramakrishna, a seasoned member of this House, is making such wild, unfounded and baseless allegations against me. Cannot the Government demolish a house if it is illegally constructed ? If it is illegally constructed, should the Government not take action according to law ? A note about this matter has been furnished to me just know. This is a person having a hut there. It is Government land. Some people have constructed hutments there. Government is taking action to demolish them as per law.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಮಂತ್ರಿಗಳು ವಿವರ ಹೇಳಬಾರದು. ಯಾರು ಮೊದಲು ಅಲ್ಲಿ ಮನೆಯನ್ನು ಕಟ್ಟಿದ್ದರು, ಯಾವ ಜಾಗದಲ್ಲಿ ಮನೆಯನ್ನು ಕಟ್ಟಿದ್ದರು, ಸರ್ಕಾರ ಇದಕ್ಕೆ ಪರವಾನಿಯನ್ನು ಕೊಟ್ಟಿತ್ತೇ ಇಲ್ಲವೇ, ಮಾನ್ಯ ಬಸವಲಿಂಗಪ್ಪನವರು ಇದಕ್ಕೆ ಶಿಫಾರಸ್ಸು ಮಾಡಿದ್ದರೇ ಇಲ್ಲವೇ, ಇದು ಯಾವುದೂ ನಮಗೆ ಗೊತ್ತಿಲ್ಲ. ಮೊದಲು ಮಾನ್ಯ ಸದಸ್ಯರಿಗೆ ವಿವರಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟು ನಂತರ ಮಾನ್ಯಮಂತ್ರಿಗಳು ವಿವರಗಳನ್ನೆಲ್ಲಾ ಹೇಳಬಹುದು. ಮಾನ್ಯ ಸಚಿವರು ಊಹಿಸಿಕೊಂಡು ಮಾತನಾಡುತ್ತಿದ್ದಾರೆ. ಮಾನ್ಯ ಅಧ್ಯಕ್ಷರೆ, ತಾವು ನಿಲುವಳಿ ಸೂಚನೆ ಮೇಲೆ ಚರ್ಚೆಗೆ ಅವಕಾಶ ಕೊಡಿ, ಆಗ ನಾವೂ ವಿವರಗಳನ್ನು ಹೇಳುತ್ತೇವೆ. ಅವರು ವಿವರಗಳನ್ನು ಹೇಳಲಿ. ಗ್ರಾಮಲೆಕ್ಕಿಗನಾಗಲೀ ಅಥವಾ ತಹಶೀಲ್ದಾರನಾಗಲೀ ತಪ್ಪು ಮಾಡಿದರೆ ಅದಕ್ಕೆ ಜವಾಬ್ದಾರರು ಸಂಬಂಧಪಟ್ಟ ಖಾತೆ ಸಚಿವರು ಎಂದು ಹೇಳಿರುವ ಅಧ್ಯಕ್ಷರು ರೂಲಿಂಗ್ಸ್ ಬೇಕಾದಷ್ಟು ಇವೆ. ಮಾನ್ಯ ಸಚಿವರ ಒಪ್ಪಿಗೆ ಪಡೆದು ಮಾಡಿದ್ದರೆ ಅಥವಾ ಅವರ ಹೇಳಿಕೆ ಪ್ರಕಾರ ಮಾಡಿದ್ದರೆ ಅಥವಾ ಇಲ್ಲವೇ ಎನ್ನುವುದು ಬೇರೆ. ಗೊತ್ತಿಲ್ಲದೆಯು ಮಾಡಿರಬಹುದು. ಆದರೆ, ಜವಾಬ್ದಾರಿ ಸಂಬಂಧಪಟ್ಟ ಖಾತೆ ಸಚಿವರ ಮೇಲಿರುತ್ತದೆ.

SRI B. BASAVALINGAPPA.—This is the person who wanted to grap some more land and obstruct the people who were living there. His house is there. He wanted to have a big hotel facing the main road. It appears, the revenue authorities have taken action against him. It is said that Sri Basavalingappa contested from this constituency and so whatever action the revenue officers have taken, Basavalingappa has asked them to do so.

SRI S. BANGARAPPA.—My submission is, from both sides already the preliminary remarks have been submited to the chair and the chair is in possession of all those matter. It is for the Chair to decide whether to give consent or not. So far as the details are concerned, only after the adjournment motion is allowed they can be given.

ಶ್ರೀ ವೈ. ರಾಮಕೃಷ್ಣ.—ಈಗ ಮಾನ್ಯ ಮಂತ್ರಿಗಳು ಬಂದಿದ್ದಾರೆ : ನಾನೇನೂ ಉದ್ವೇಗ ವಾಗುವುದಿಲ್ಲ. ಅವರಲ್ಲಿ ನಾನು ನೇರವಾದ ಪ್ರಶ್ನೆ ಕೇಳುತ್ತೇನೆ. ಮಾನ್ಯ ಸಚಿವರು ಹರಿಜನರು. ಹರಿಜನರ ಹಿತಸಂರಕ್ಷಣೆ ಮಾಡುವ ಪವಿತ್ರವಾದ ಜವಾಬ್ದಾರಿ ಅವರ ಹೆಗಲ ಮೇಲಿದೆ, ಅವರ ಪ್ರಾಣ, ಮಾನ, ಮನೆ ಮುಂತಾದವನ್ನು ಸಂರಕ್ಷಣೆ ಮಾಡಬೇಕಾದವರು ನೀವು. ಹೀಗಿರುವಾಗ ವಿಧಾನಸೌಧಕ್ಕೆ ಒಂಭತ್ತು ಮೈಲಿ ದೂರದಲ್ಲಿ ನಡೆದಿರುವ ಈ ದುರ್ಘಟನೆ ಮಾನ್ಯ ಸಚಿವರಿಗೆ ಶೋಭಾಯಮಾನವಾಗಿ ಕಾಣುತ್ತದೆಯೇ ?

SRI B. BASAVALINGAPPA.—Why are you making a personal allegation? You cannot to this, It is most unbecoming of any member of this House. He cannot be allowed to talk in that strain,

ಶ್ರೀ ವೈ. ರಾಮಕೃಷ್ಣ.—ಪ್ರಜಾಪ್ರಭುತ್ವ ತತ್ವಗಳನ್ನೆ ಎತ್ತಿಹಿಡಿಯುವ ತಾವು ಮಂತ್ರಿಗಳಾಗಿ ಇನ್ನೊಬ್ಬರ ಮನೆ ಒಡೆಸುವ ಪ್ರಯತ್ನ ಮಾಡಬಾರದಾಗಿತ್ತು.

SRI B. BASAVALINGAPPA,—Why do you make allegation against me?

ಶ್ರೀ ವೈ. ರಾಮಕೃಷ್ಣ.—ನಾನು ದೋಷಾರೋಪಣೆ ಮಾಡುತ್ತಾ ಇಲ್ಲ. ಮಾನ್ಯ ಬಸವಲಿಂಗಪ್ಪನವರ ವಿಚಾರದಲ್ಲಿ ನನಗೆ ಗೌರವವಿದೆ ಅಭಿಮಾನವಿದೆ ಆದರೆ, ಅವರು ಒಂದು ರಾಜ್ಯದ ಮಂತ್ರಿಯಾಗಿ ಮಾಡಿರುವ ಕಾರ್ಯದ ಬಗ್ಗೆ ನಾನು ಹೇಳಬೇಕಾಗುತ್ತದೆ. ಒಬ್ಬ ಬಡ ಹರಿಜನ, ಹನ್ನೆರಡು ಮಕ್ಕಳ ತಂದೆ.....

SRI S. BANGARAPPA.—Still the hon'ble member is trying to give details about the matter.

SRI B. BASAVALINGAPPA,—He is making a personal allegation. I am here to care for all and not one individual.

ಶ್ರೀ ಎಸ್. ಬಂಗಾರಪ್ಪ.—ನಿಲುವಳಿ ಸೂಚನೆಯನ್ನು ಚರ್ಚೆಗೆ ಅವಕಾಶ ಕೊಡದೆ, ಅವರು ವಿವರವಾಗಿ ಮಾತನಾಡಕೂಡದು. ನಿಲುವಳಿ ಸೂಚನೆಗೆ ಅವಕಾಶ ಸಿಕ್ಕಿದ ಮೇಲೆ ಬೇಕಾದರೆ ಅವರು ವಿವರವಾಗಿ ಮಾತನಾಡಲಿ ; ನಾವೂ ಮಾತನಾಡುತ್ತೇವೆ.

MR. SPEAKER.—No, no. I am very vigilant about this issue. ಈಗಾಗಲೇ ಮೂರು ಗಂಟೆ ಇಪ್ಪತ್ತೈದು ನಿಮಿಷವಾಯಿತು. ಇನ್ನೂ ಕಾರ್ಯಕಲಾಪಗಳು ಪಲವಾರು ಇರುವುದರಿಂದ, ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಸ್ವಲ್ಪ ಕಾಲದಲ್ಲಿಯೇ ಮಂಡಿಸ ಬಹುದು.

ಶ್ರೀ ವೈ ರಾಮಕೃಷ್ಣ.—ನಾನು ಹೇಳುವ ಒಂದೊಂದು ವಾಕ್ಯಕ್ಕೂ ಅವರು ತೊಂದರೆಕೊಡುತ್ತಿದ್ದಾರೆ. ತಾವು ನನಗೆ ರಕ್ಷಣೆ ಕೊಡಬೇಕು. ಇಪ್ಪತ್ತೈದನೇ ತಾರೀಖು ನಡೆಯಲಿದ್ದ ಚುನಾವಣೆಗೆ ಮಾರಪ್ಪನವರೂ ಅರ್ಜಿ ಹಾಕಿದ್ದರು; ನಂತರ ವಾಪಸ್ಸು ತೆಗೆದುಕೊಂಡರು ಅವರು ಅರ್ಜಿ ಹಾಕಿದ್ದೇ ತಪ್ಪು ಎಂದು ತಿಳಿದುಕೊಂಡು ಅಧಿಕಾರಿಗಳು ೯-೩-೧೯೭೮ರಂದು ಅವರಿಗೆ ಷೋಕಾಸ್ ನೋಟಿಸ್ ಕೊಟ್ಟರು; ನಂತರ ೧೪-೩-೭೮ರಂದು ಡೆಮಾಲಿಷ್ ಮಾಡಿದರು; ಆಮೇಲೆ ೧೮-೩-೧೯೭೮ರಂದು ಮನೆಯನ್ನು ಸಂಪೂರ್ಣ ಒಡೆದು ಹಾಕಿದರು. ಆದರೆ, ಕಾನೂನಿನಲ್ಲಿ ಏನು ಹೇಳುತ್ತದೆ ಎಂದರೆ, ಎವಿಕ್ಷನ್‌ಗೆ ಮೊದಲು ಹದಿನೈದು ದಿವಸ ಷೋಕಾಸ್ ನೋಟೀಸ್ ಕೊಡಬೇಕು, ಮತ್ತೆ ಡೆಮಾಲಿಷನ್‌ಗೂ ಸಾಕಷ್ಟು ಟೈಂ ಕೊಡಬೇಕು ಎಂದು. ಆದರೆ, ಇಲ್ಲಿ ಮೂರು ದಿವಸವೂ ಅವಕಾಶ ಕೊಡದೆ, ೧೪ನೇ ಮಾರ್ಚಿ ೧೯೭೮ ರಂದು ಮನೆಯನ್ನು ಸಂಪೂರ್ಣ ಕೆಡವಿ ಹಾಕಿದ್ದಾರೆ. ಅಲ್ಲದೆ, ಮಾರನೆಯ ದಿವಸ ಒಡೆದು ಹಾಕಿದ ಮನೆಯ ಎದುರಿನಲ್ಲಿ ಮಾನ್ಯ ಸಚಿವರು ಹೋಗಿ ಹೂವಿನ ಹಾರವನ್ನು ಹಾಕಿಸಿಕೊಂಡು ಬಂದಿದ್ದಾರೆ. ಇದು ಹೌದೋ ಇಲ್ಲವೋ ಎಂದು ಅವರೇ ಹೇಳಲಿ. ಇಲ್ಲ ಎಂದರೆ, ನಾನು ಇಲ್ಲಿ ಕುಳಿತುಕೊಳ್ಳುವುದಕ್ಕೆ ತಯಾರಿಲ್ಲ.

ಇವೊತ್ತು ನಾನಲ್ಲ ಸುಳ್ಳು ಹೇಳುತ್ತಾ ಇರುವುದು. ಇದರಲ್ಲಿ ನನ್ನ ಇಂಟರೆಸ್ಟ್ ಏನು ಇದೆ ಎಂದರೆ ನೀವು ೧೪ನೇ ತಾರೀಖು ಅವನ ಮನೆಯನ್ನು ಒಡೆಸಿ ಮಾರನೇ ದಿವಸ ೧೫ನೇ ತಾರೀಖು ಅವರ ಹತ್ತಿರ ಹೋಗಿ ಹೂವಿನ ಹಾರ ಹಾಕಿಸಿಕೊಂಡು ಬರಲಿಲ್ಲವೇ ? ನಿಮ್ಮ ಕೈಯಲ್ಲಿ ಅಧಿಕಾರ ಇದೆ ಅಂತ ಆ ಹರಿಜನರ ಮನೆಯನ್ನು ಒಡೆಸಿ ಅವರನ್ನು ಬೀದಿ ಪಾಲು ಮಾಡಿದಿರಲ್ಲಾ ಅದನ್ನು ನಾನು ಖಂಡಿಸುತ್ತೇನೆ. ಆದುದರಿಂದ ನಾನು ಹೇಳುವುದು ಏನೆಂದರೆ ಮಾನ್ಯ ರೆವಿನ್ಯೂ ಮಂತ್ರಿಗಳು ಈ ಕೆಲಸವನ್ನು ಅವರು ಮಾಡಿರುವುದರಿಂದ ಅವರು ಕ್ಷಮಾಪಣೆ ಕೇಳಬೇಕು ಮತ್ತು ಎರಡನೆಯದಾಗಿ ತಮ್ಮ ಸ್ವಂತ ದುಡ್ಡಿನಲ್ಲಿ ಆತನ ಮನೆಯನ್ನು ಕಟ್ಟಿಸಿಕೊಡಬೇಕು ಎಂದು ಹೇಳುತ್ತೇನೆ.

(ಶ್ರೀ ಬಿ. ಬಸವಲಿಂಗಪ್ಪನವರು ಉತ್ತರ ಹೇಳಲು ಎದ್ದು ನಿಂತರು).

SRI MALLUR ANANDARAO.—Sir, I have also signed the adjournment motion. I may also be permitted to say a few words. I think I have a right to say a few words.

3-30 P.M,

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳಲು ನಿಂತಿದ್ದಾರೆ. ನೀವು ಈ ರೀತಿ ಒತ್ತಾಯ ಮಾಡಬಾರದು.

(INTERRUPTIONS)

ಶ್ರೀ ಎಸ್. ಆರ್. ಬೊಮ್ಮಾಯಿ.—ಇದು ಬಹಳ ಮಹತ್ವವಾದ ವಿಚಾರ. ಒಬ್ಬ ಹರಿಜನ ಮನೆಯನ್ನು ಒಡೆಸಿ ಅನ್ಯಾಯ ಮಾಡಿರತಕ್ಕದ್ದರ ಬಗ್ಗೆ ಈ ಒಂದು ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅನೇಕ ಜನ ಸಹಿ ಹಾಕಿದ್ದಾರೆ. ಅದರಲ್ಲಿ ಮಾನ್ಯ ಆನಂದರಾಯರೂ ಕೂಡ ಒಬ್ಬರು ಸಹಿ ಹಾಕಿದ್ದಾರೆ, ಆದುದರಿಂದ ತಾವು ಅವರಿಗೆ ಒಂದೆರಡು ಮಾತುಗಳನ್ನಾಡಲು ಅವಕಾಶ ಕೊಡಿ, ಅವರು ಈ ಬಗ್ಗೆ ಏನಾದರೂ ಇದ್ದರೆ ಹೇಳಲಿ.

† ಶ್ರೀ ಮಳ್ಳೂರು ಆನಂದರಾವ್,—ಈ ಬಗೆ ನಾವು ಏನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವೋ, ಇದನ್ನು ಅಂಗೀಕಾರ ಮಾಡಬೇಕು ಎಂದು ನಾವು ಏನು ಹೇಳಿದ್ದೆವೋ ಆದರ ಬಗ್ಗೆ ಮಾನ್ಯ ಪುಟ್ಟಸ್ವಾಮಿಯವರು ಮತ್ತು ಮಾನ್ಯ ವೈ. ರಾಮಕೃಷ್ಣ ಅವರು ಚೆನ್ನಾಗಿ ಹೇಳಿದ್ದಾರೆ. ಈ ವಿಚಾರ ಒಂದು ಹರಿಜನ ಕುಟುಂಬಕ್ಕೆ ಸಂಬಂಧಪಟ್ಟದ್ದು, ಆ ಕುಟುಂಬ ಬೀದಿಪಾಲಾಗಿದೆ. ಆ ಮನೆಯನ್ನು ಇವರು ನೇರವಾಗಿ ಒಡೆಸಿ ಹಾಕಿದ್ದಾರೆ. ಇದರ ಸತ್ಯಸಂಗತಿಗಳು ಗೊತ್ತಾಗಬೇಕು. ಶ್ರೀಮಾನ್ ಬಿ. ಬಸವಲಿಂಗಪ್ಪನವರು ಇದಕ್ಕೆ ಏನು ಉತ್ತರ ಹೇಳುತ್ತಾರೋ ಹೇಳಲಿ. ಈ ಕುಟುಂಬ ಬೀದಿ ಪಾಲಾಗಿ ಅವರು ಒಂದು ಅರ್ಜಿಯನ್ನು ಬರೆದುಕೊಟ್ಟು ಆದರಲ್ಲಿ ಅವರ ಸಹಿ ಹಾಕಿ ನನಗೆ ಕಳುಹಿಸಿಕೊಟ್ಟಿದ್ದಾರೆ, ಯಾರು ಈ ಮನೆಯನ್ನು ಒಡೆಸಿ ಹಾಕಿದರೋ, ಶ್ರೀಮಾನ್ ಬಿ. ಬಸವಲಿಂಗಪ್ಪನವರೇ ಅವನ ಮನೆಯ ಹತ್ತಿರ ಮಾರನೆಯ ದಿವಸ ಹೋಗಿ ಅವನ ಕೈಯಲ್ಲಿ ಹೂಹಾರ ಹಾಕಿಸಿಕೊಂಡು ಬಂದಿದ್ದಾರೆ, ಮತ್ತು ಜಯ ಜಯಕಾರ ಹಾಕಿಸಿಕೊಂಡು ಬಂದಿದ್ದಾರೆ. ಅವನು ಈ ಬರೆದುಕೊಟ್ಟ ಲೆಟರ್ ಅನ್ನು ತಮಗೆ ಕಳುಹಿಸಿಕೊಡುತ್ತೇನೆ. ದಯವಿಟ್ಟು ಆ ಬಗ್ಗೆ ತನಿಖೆ ಮಾಡಿ ಇದರಲ್ಲಿ ಏನಾದರೂ ತಪ್ಪು ಇದ್ದರೆ ಅವನಿಗೆ ಶಿಕ್ಷೆ ಮಾಡಿ. ಒಂದು ವೇಳೆ ಇದರಲ್ಲಿ ಸತ್ಯಸಂಗತಿ ಇದ್ದರೆ ಅದಕ್ಕೆ ಇವರು ತಮ್ಮ ಕ್ಷಮಾಪಣೆಯನ್ನು ಕೇಳಿಕೊಳ್ಳಬೇಕು. ಒಬ್ಬ ಹರಿಜನ ಕುಟುಂಬಕ್ಕೆ ಈ ರೀತಿ ಅನ್ಯಾಯ ಮಾಡಿದರೆ ಹೇಗೆ ಸುಧಾರಣೆಯಾಗುತ್ತದೆ. ಇದರ ರೆಕಾರ್ಡ್ ಎಲ್ಲಾ ನನ್ನ ಹತ್ತಿರ ಇದೆ. ಇದರ ಬಗ್ಗೆ ಫೋಟೋಸ್ಟೇಟೆಡ್ ಕಾಪೀಸ್ ಕೂಡ ಕೊಟ್ಟಿದ್ದಾರೆ. ಈ ಹರಿಜನರ ಬಗ್ಗೆ ಆಗಿರತಕ್ಕಂಥಾ ಅನ್ಯಾಯಕ್ಕೋಸ್ಕರ ಈ ಒಂದು ಅಡ್ಜರ್ನ್‌ಮೆಂಟ್ ಅನ್ನು ತಂದಿದ್ದೇವೆ. ಇವರು ಹರಿಜನರನ್ನು ಗುತ್ತಿಗೆಗೆ ನಾವು ತೆಗೆದುಕೊಂಡಿದ್ದೇವೆ, ನೀವು ತೆಗೆದುಕೊಂಡಿಲ್ಲ ಅನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಆ ಹರಿಜನರೆಲ್ಲರ ಹಿತಾಸಕ್ತಿಗಳನ್ನೆಲ್ಲಾ ನಾವೇ ತೆಗೆದುಕೊಂಡಿದ್ದೇವೆ ಅನ್ನುವ ರೀತಿಯಲ್ಲಿ ಇವರು ಮಾತನಾಡುವ ಹಾಗೆ ಕಾಣುತ್ತದೆ ಆದ್ದರಿಂದ ತಾವು ದಯವಿಟ್ಟು ಕೇಳಬೇಕು, ಏನೆಂದರೆ, ತಮಗೆ ಹರಿಜನರ ಬಗ್ಗೆ ಇಷ್ಟೊಂದು ಕಳಕಳಿ ಇದ್ದರೆ, ಈ ನಿಲುವಳಿ ಸೂಚನೆಯನ್ನು ಇಲ್ಲಿ ಮಂಡಿಸಲು ತಾವುಗಳು ಸರ್ವಾನುಮತದಿಂದ ಒಪ್ಪಿಕೊಳ್ಳಿ. ನನ್ನ ಹತ್ತಿರ ಈ ಹರಿಜನ ಕುಟುಂಬವನ್ನು ಬೀದಿಪಾಲು ಮಾಡಿದ ಬಗೆ ಸಾಕ್ಷಿ ಆಧಾರಗಳು ಇವೆ. ಫೋಟೋ ಸ್ಟಾಟ್ ಕಾಪಿ ಸಮೇತ ಎಲ್ಲ ರೆಕಾರ್ಡ್‌ಗಳನ್ನು ನಾನು ತೆಗೆದುಕೊಂಡು ಬಂದಿದ್ದೇನೆ. ಹರಿಜನರ ಹೆಸರನ್ನು ಹೇಳಿದರೆ ತಮ್ಮ ಮೈಮೇಲೆ ಏನೇನೋ ಆಗುತ್ತದೆ. ಆಗಲಿ ನನಗೆ ಬಹಳ ಸಂತೋಷ. ಆದ ಕಾರಣ ಈ ವ್ಯಕ್ತಿಯ ಮನಯನ್ನು ಒಡೆದು ಹಾಕಿರುವ ಹಿನ್ನೆಲೆ ಏನು, ಇದರ ಹಿಂದೆ ಏನೇನು ಶಕ್ತಿ ಅಡಗಿದೆ ಎಂಬುದನ್ನೆಲ್ಲಾ ಬಯಲಿಗೆಳೆಯಬೇಕಾದರೆ ಇದರ ಬಗ್ಗೆ ಸಂಪೂರ್ಣವಾದ ಚರ್ಚೆಯಾಗಬೇಕಾಗಿದೆ. ಆದ್ದರಿಂದ ಇದಕ್ಕೆ ತಾವುಗಳು ತಮ್ಮ ಸಂಪೂರ್ಣವಾದ ಬೆಂಬಲ ಕೊಡಬೇಕು. ಇಲ್ಲದಿದ್ದರೆ ನಿಮ್ಮ ನಿಜವಾದ ಬಣ್ಣ ಏನು ಎಂಬುದು ಬಯಲ್ಲಾಗುತ್ತದೆ. ಆದ್ದರಿಂದ ಏನು ಎಂಬುದು ಬಯಲಾಗುತ್ತದೆ. ಆದ್ದರಿಂದ ಇದನ್ನು ತಾವು ಒಪ್ಪಿಕೊಳ್ಳಿ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಈ ಬಗ್ಗೆ ಏನು ಹೇಳುತ್ತಾರೆ ?

ಶ್ರೀ ವೈ. ರಾಮಕೃಷ್ಣ.—ತಾವು ನನ್ನ ನಿಲುವಳಿ ಸೂಚನೆಯನ್ನು ಆಲೋ ಮಾಡಿದ್ದೀರಾ ?

ಅಧ್ಯಕ್ಷರು.—ಇಲ್ಲ.

ಶ್ರೀ ವೈ. ರಾಮಕೃಷ್ಣ.—ಹಾಗಿದ್ದ ಮೇಲೆ ಮಾನ್ಯ ಮಂತ್ರಿಗಳಿಗೆ ಉತ್ತರ ಕೊಡುವಂತೆ ಯಾವ ರೀತಿ ಹೇಳುತ್ತೀರಾ ? ನಮ್ಮ ಬಳಿ ಇರುವಂತಹ ಎಲ್ಲ ಡಾಕ್ಯುಮೆಂಟ್ಸ್‌ನ್ನು ಅವರ ಕಡೆಗೆ ಇನ್ನೂ ಕಳುಹಿಸಿಕೊಟ್ಟಿಲ್ಲ. ಆದ್ದರಿಂದ ಅವರು ಯಾವ ರೀತಿ ಉತ್ತರ ಕೊಡುತ್ತಾರೆ :

ಅಧ್ಯಕ್ಷರು.—ಪ್ರಿಲಿಮಿನರಿಯಾಗಿ ಈ ಬಗ್ಗೆ ತಮಗೆ ಏನಾದರೂ ಹೇಳುವುದಿದ್ದರೆ ಹೇಳಿ ಎಂದು ಹೇಳಿದೆ, ಅದರಂತೆ ತಾವು ಹೇಳಿದಿರಿ, ಅದಕ್ಕೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆಂದು ಕೇಳಿದೆ.

ಶ್ರೀ ವೈ. ರಾಮಕೃಷ್ಣ.—ಅವರು ಹೇಳಿದ ಮೇಲೆ ನನಗೂ ಮಾತನಾಡಲು ಅವಕಾಶ ಮಾಡಿ ಕೊಡಬೇಕು.

ಅಧ್ಯಕ್ಷರು.—ತಮ್ಮ ನಿಲುವಳಿ ಸೂಚನೆಯನ್ನು ಇನ್ನೂ ಒಪ್ಪಿಕೊಂಡಿಲ್ಲ. ಆದ್ದರಿಂದ ಮತ್ತೆ ತಮಗೆ ಮಾತನಾಡಲು ಅವಕಾಶ ಕೊಡುವುದಕ್ಕಾಗುವುದಿಲ್ಲ. ಅವರು ಹೇಳಿಕೆ ಕೊಟ್ಟನಂತರ ನಾನು ರೂಲಿಂಗ್ ಕೊಡುತ್ತೇನೆ,

ಶ್ರೀ ವೈ. ರಾಮಕೃಷ್ಣ.—ನನ್ನ ಹತ್ತಿರ ಇದಕ್ಕೆ ಸಂಬಂಧಪಟ್ಟ ಡಾಕ್ಯುಮೆಂಟ್ಸ್ ಇದೆ. ಆದ್ದರಿಂದ ಅವರೇನಾದರೂ ಹೊಸ ವಿಚಾರಗಳನ್ನು ಹೇಳಿದರೆ, ಅದರ ಬಗ್ಗೆ ಮಾತನಾಡಲು ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು.—ರೂಲ್ಸ್ ಪ್ರಕಾರ ಇಲ್ಲಿ ಪುಸ್ತಕಗಳನ್ನಾಗಲೀ, ಡಾಕ್ಯುಮೆಂಟ್ಸ್ ಆಗಲೀ ಓದುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ಅಂಥಾದೇನಾದರೂ ಇದ್ದರೆ ನನ್ನ ಕಡೆ ಕಳುಹಿಸಿಕೊಡಿ.

ಶ್ರೀ ವೈ. ರಾಮಕೃಷ್ಣ.—ನಾನು ಪೂರ್ತಾ ಓದಿಲ್ಲ. ಓದಿದ ನಂತರ ಕಳುಹಿಸಿಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಭಾಪತಿಯವರೇ, ಮಾನ್ಯ ವೈ. ರಾಮಕೃಷ್ಣ ಅವರು ಹೇಳಿದ ಮೇಲೆ ಮಾನ್ಯ ಬಸವಲಿಂಗಪ್ಪನವರು ಈ ರೀತಿ ಕೆಲಸ ಮಾಡಿದ್ದಾರೆಯೇ ಎಂದು ಮಾನ್ಯ ಸದಸ್ಯರಲ್ಲಿ ಸ್ವಲ್ಪ ಕಳವಳವಾಗಿರಬೇಕು. ಆದರೆ ನನ್ನ ಜೀವನದಲ್ಲಿ ಇದೇ ಮೊದಲ ಸಲ ಅವರು ಈ ರೀತಿ ಹೇಳಿದ್ದನ್ನು ನಾನು ಕೇಳಿದ್ದು, ಮಾನ್ಯ ವೈ. ರಾಮಕೃಷ್ಣ ಅವರು ನನ್ನ ವಿಚಾರದಲ್ಲಿ ಈ ರೀತಿ ಹೇಳಿದ್ದಕ್ಕೆ ಅವರಿಗೆ ನನ್ನ ಧನ್ಯವಾದಗಳು. ಯಲಹಂಕದ ಬಳಿ ಅಲ್ಲಸಂದ್ರ ಎಂಬುದು ಒಂದು ಗ್ರಾಮ. ಅಲ್ಲಿ ೫೫೫-೬೦ ಅಡಿಗಳಷ್ಟು ಅಗಲವಿರತಕ್ಕಂಥ ಒಂದು ರಸ್ತೆ ಇದೆ. ಅಲ್ಲಿ ಹರಿಜನರು ಹೋಗಿ ಸ್ವಲ್ಪ ರಸ್ತೆ ಜಾಗ ಬಿಟ್ಟು ಉಳಿದ ಜಾಗದಲ್ಲಿ ಗುಡಿಸಲುಗಳನ್ನು ಹಾಕಿದ್ದಾರೆ. ಕೆಲವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಮಾರಪ್ಪ ಎನ್ನುವ ವ್ಯಕ್ತಿ ಈ ರಸ್ತೆಯ ಎರಡು ಭಾಗಗಳಲ್ಲಿ ಎರಡು ಮನೆಗಳನ್ನು ಕಟ್ಟಿದ್ದಾರೆ. ಜೊತೆಗೆ ಮೂರನೆಯದಾಗಿ ಅಂಗಡಿ ಕಟ್ಟಬೇಕೆಂದು ಪ್ರಯತ್ನ ಮಾಡಿದ್ದಾನೆ, ಇದಕ್ಕೆ ಯಾರ ಅನುಮತಿಯನ್ನೂ ಪಡೆದುಕೊಂಡಿಲ್ಲ ಯಲಹಂಕ ಮತ್ತು ದೊಡ್ಡಬಳ್ಳಾಪುರ ಮೈನ್ ರೋಡಿನ ಹತ್ತಿರ ಇದು ಇರುವುದು. ಅಲ್ಲಿರುವ ಹರಿಜನರಿಗೆ ತೊಂದರೆ ಕೊಡುವ ರೀತಿಯಲ್ಲಿಯೇ ಈತ ಮನೆ ಕಟ್ಟಿಕೊಂಡಿದ್ದ ಎಂದು ನನ್ನ ಹತ್ತಿರವಿರುವ ವರದಿಯಲ್ಲಿದೆ. ಕೆಲವರು ಈ ಬಗ್ಗೆ ಕಂಪ್ಲೇಂಟ್ ಮಾಡಿದ್ದಾರೆ. ನಂತರ ಸಂಬಂಧಪಟ್ಟ ಅಧಿಕಾರಿಗಳು ಹೋಗಿ ಅದನ್ನು ಕೆಡವಿದ್ದಾರೆ, ಇದನ್ನು ಅನುಮತಿ ಇಲ್ಲದೆ ಕಟ್ಟಿದ್ದ ಕಾರಣದಿಂದ ಕಾನೂನು ಪ್ರಕಾರ ಕ್ರಮ ತೆಗೆದುಕೊಂಡಿದ್ದಾರೆ. ಆದ್ದರಿಂದ ಮಂತ್ರಿಯಾದವರು ವೈಯಕ್ತಿಕವಾಗಿ ಸೇಡನ್ನು ತೀರಿಸಿಕೊಳ್ಳಲು ಈ ರೀತಿ ಮಾಡಿದ್ದಾರೆಂದು ಹೇಳುವುದು ಸರಿಯಲ್ಲ. ಈ ವ್ಯಕ್ತಿ ಚುನಾವಣೆಯಲ್ಲೂ ಸ್ಪರ್ಧೆ ಮಾಡಿದಾಗ ಎಷ್ಟು ಓಟುಗಳು ಬಂದವು ಎಂಬುದು ನನಗೆ ಗೊತ್ತಿಲ್ಲ. ಮತ್ತು ಆತ ಯಾರು ಎಂಬುದನ್ನು ಸಹ ನಾನು ನೋಡಿಲ್ಲ. ಈತ ನನ್ನ ಮನೆಗೆ ಬಂದಿದ್ದ ಎಂದು ಹೇಳುತ್ತಾರೆ. ನನ್ನ ಮನೆಗೆ ಸಾವಿರಾರು ಜನರು ಬರುತ್ತಾರೆ. ಆದ್ದರಿಂದ ವೈಯಕ್ತಿಕವಾಗಿ ಈತ ಯಾರು ಎಂಬುದು ನನಗೆ ಗೊತ್ತಿಲ್ಲ. ಮಾನ್ಯ ಬಸವಲಿಂಗಪ್ಪನವರು ಹರಿಜನರಾದರೂ ಸಹ ಹರಿಜನರನ್ನು ಕಾಪಾಡತಕ್ಕಂಥ ಶಕ್ತಿ, ಜವಾಬ್ದಾರಿ ಇವರಿಗೆಲ್ಲಿದೆ ಎಂದು ಹೇಳಿದರು. ನಾನಾದರೂ ಹೇಳುತ್ತೇನೆ, ಹರಿಜನರನ್ನು ಕಾಪಾಡತಕ್ಕಂಥ ಒಂದು ಜವಾಬ್ದಾರಿ ಈ ಸಭೆಗಿದೆ, ಸರ್ಕಾರಕ್ಕಿದೆ ಮತ್ತು ಎಲ್ಲರಿಗೂ ಇದೆ. ಅದು ನನ್ನೊಬ್ಬನಿಗೇ ಇದೆ ಎಂದು ಹೇಳುವುದಿಲ್ಲ, ಎಲ್ಲರನ್ನೂ ತಕ್ಷಣೆ ಮಾಡತಕ್ಕಂಥ ಒಂದು ಜವಾಬ್ದಾರಿ ಅಧಿಕಾರದಲ್ಲಿರುವವರ ಮೇಲಿರುತ್ತದೆ. ಅದು ಅವರ

ಕರ್ತವ್ಯ. ಆದ್ದರಿಂದ ಈ ದೇಶದಲ್ಲಿ ನಿರ್ಗತಿಕರು ಯಾರು ಇದ್ದಾರೆ, ಅವರೆಲ್ಲರನ್ನೂ ನಾವು ರಕ್ಷಣೆ ಮಾಡುತ್ತೇವೆ. ಮಾನ್ಯ ರಾಮಕೃಷ್ಣ ಅವರು ನನ್ನ ಮೇಲೆ ವೈಯಕ್ತಿಕವಾಗಿ ಆರೋಪ ಮಾಡುವಾಗ ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆ ಮಾಡುತ್ತಾರೆಂದು ನಾನು ನಿರೀಕ್ಷೆ ಮಾಡಿದ್ದೆ. ಆದರೆ ಅವರು ತಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಣೆ ಮಾಡಿಲ್ಲ. ಮಾನ್ಯ ಸದಸ್ಯರಿಗೆ ಇದು ಸರಿಯಲ್ಲ. ಒಟ್ಟಿನಲ್ಲಿ ನಾನು ಹೇಳುವುದಿಷ್ಟೆ. ಈ ದೇಶದಲ್ಲಿ ಕಾನೂನಿಗೆ ವಿರುದ್ಧವಾಗಿ ಯಾರೇ ನಡೆದುಕೊಳ್ಳಲಿ, ಅವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ವೈ. ರಾಮಕೃಷ್ಣ.—ತಾವು ಆ ಜಾಗಕ್ಕೆ ಹೋಗಿದಿರೋ ಅಥವಾ ಇಲ್ಲವೋ ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಹೋಗಿಲ್ಲ. ಹೋದ ಜ್ಞಾಪಕ ನನಗಿಲ್ಲ. ಯಾರು ಕಾನೂನಿಗೆ, ರೂಲ್ಸಿಗೆ ವಿರುದ್ಧವಾಗಿ ನಡೆದುಕೊಳ್ಳುತ್ತಾರೆ ಅವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ. ಯಾರೋ ಹೇಳಿದರು ಎಂದು ಕೇಳುವ ಪ್ರಶ್ನೆಯೇ ಇಲ್ಲ. ತಪ್ಪು ಮಾಡಿದವರು ಹರಿಜನರೇ ಆಗಲೀ, ಬೇರೆಯವರೇ ಆಗಲೀ, ಅವರ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುತ್ತೇವೆ. ಆದ್ದರಿಂದ ಈ ನಿಲುವಳಿ ಸೂಚನೆಗೆ ಅವಕಾಶವಿಲ್ಲ.

ಶ್ರೀ ವೈ. ರಾಮಕೃಷ್ಣ.—ಅಂದರೆ ನಾನು ಮಾಡಿದ ಅಲಿಗೇಷನ್ ಪ್ರೂವ್ ಆದಂತಾಯಿತು. ನಾನು ಹೇಳುತ್ತಿದ್ದೇನೆ, ಅವರು ನಮ್ಮ ಪಕ್ಷಕ್ಕೆ ಕೆಲಸ ಮಾಡಿದ್ದರಿಂದ...

ಅಧ್ಯಕ್ಷರು.—ತಾವು ಈಗ ಅಲಿಗೇಷನ್ ಮಾಡುವುದಕ್ಕೆ ಎದ್ದು ನಿಂತಿಲ್ಲ. ನಿಲುವಳಿ ಸೂಚನೆ ಮಂಡನೆ ಮಾಡಲು ತಾವು ಅವಕಾಶ ಕೇಳಿದ್ದೀರಿ. ನಾನು ಇನ್ನೂ ಅನುಮತಿ ಕೊಟ್ಟಿಲ್ಲ. ಈ ಹಂತದಲ್ಲಿ ಪದಗಳನ್ನು ತಾವು ಉಪಯೋಗ ಮಾಡುವಾಗ ಲೆಕ್ಕಾಚಾರವಾಗಿ ಉಪಯೋಗ ಮಾಡಿ

ಶ್ರೀ ವೈ. ರಾಮಕೃಷ್ಣ.—ಮನೆಯನ್ನು ಹೊಡೆದಿರುವುದು ನಿಜ ಎಂದು ಅವರು ಹೇಳಿದ್ದಾರೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಏನು ಹೇಳಿದರೆಂಬುದನ್ನು ಎಲ್ಲ ಮಾನ್ಯ ಸದಸ್ಯರು ಕೇಳಿದ್ದಾರೆ. ಆದ್ದರಿಂದ ತಾವು ಹೇಳಿದ್ದನ್ನೇ ಹೇಳಬೇಡಿ.

ಶ್ರೀ ವೈ. ರಾಮಕೃಷ್ಣ.—ಇಲ್ಲಿ ೩ ಸಮಸ್ಯೆಗಳು ಉದ್ಭವವಾಗುತ್ತವೆ. ಮುಖ್ಯವಾಗಿ ಇದೊಂದು ದುರಂತ ಘಟನೆಯಾಗಿದೆ. ಮಾನ್ಯ ಮಂತ್ರಿಗಳಾದ ಶ್ರೀ ಬಸವಲಿಂಗಪ್ಪನವರ ಮೇಲೆಯೇ ಈ ಮಾರಪ್ಪ ಎನ್ನುವ ವ್ಯಕ್ತಿ ಅರ್ಜಿ ಕೊಟ್ಟಿದ್ದಾನೆಂದುಕೊಂಡು, ಆ ಒಂದು ಸೇಡನ್ನು ತೀರಿಸಿಕೊಳ್ಳಲು ಮಾನ್ಯ ಮಂತ್ರಿಗಳು ಈ ಒಂದು ಕ್ರಮ ತೆಗೆದುಕೊಂಡಿದ್ದಾರೆ. ನಮ್ಮ ಪಕ್ಷಕ್ಕೆ ಸಹಾಯ ಮಾಡಲು ಈತ ತನ್ನ ಉಮೇದು ವಾರಿಕೆಯನ್ನು ವಾಪಸ್ ತೆಗೆದುಕೊಂಡ ಎಂಬುದೂ ಸಹ ಒಂದು ಕಾರಣ ಇಲ್ಲಿದೆ. ಇದೇ ವ್ಯಕ್ತಿ ಮಾನ್ಯ ಮಂತ್ರಿಗಳ ಹತ್ತಿರ ಹೋಗಿ ಬೇಡಿಕೊಂಡರೂ ಸಹ ಈ ರೀತಿ ಯಾದಂಥ ಕ್ರಮವನ್ನು ತೆಗೆದುಕೊಂಡಿದ್ದಾರೆ.

ಅಧ್ಯಕ್ಷರು.—ಈಗ ತಾವು ಮತ್ತೆ ಎಲ್ಲ ವಿವರಗಳನ್ನು ಹೇಳುತ್ತಾ ಹೋಗುವುದು ಸರಿಯಲ್ಲ, ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಸ್. ಎಂ. ಯಾಹ್ಯಾ.—ಹರಿಜನಗಿರಿಜನರೇ ಆಗಲಿ, ಅಥವಾ ಬೇರೆಯವರೇ ಆಗಲಿ ಅವರ ಮೇಲೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ, ನಾನು ಇದರ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಾಗಿ ಮಾನ್ಯ ಅರ್ಥ ಮಂತ್ರಿಗಳೂ ಹೇಳಿದ್ದಾರೆ ಮಾನ್ಯ ಕಂದಾಯ ಮಂತ್ರಿಯವರೂ ಹೇಳಿದ್ದಾರೆ. ಒಂದು ನೋಟೀಸ್ ಕೊಡಬೇಕಾದರೆ ರೆವಿನ್ಯೂ ಆಕ್ಟ್‌ಗಳಿಗೆ ಇಂತಿಷ್ಟು ದಿವಸಗಳಿಗೆ ಮುಂಚಿ ಕೊಡಬೇಕೆಂದು ಇದೆ. ಆದರೆ ತಾವು ಆ ರೀತಿ ಮುಂಚಿತವಾಗಿ ಕೊಟ್ಟಿಲ್ಲ ಎಂದು ಮಾನ್ಯ ರಾಮಕೃಷ್ಣ ಅವರು ಆಪಾದನೆ ಮಾಡಿದ್ದಾರೆ. ತಾವು ಎಷ್ಟು ದಿವಸಕ್ಕೆ ಮುಂಚೆ ನೋಟೀಸು ಕೊಟ್ಟಿರಿ, ಅಲ್ಲಿ ಏನಾಗಿದೆ, ಮನೆಯನ್ನು ಯಾವಾಗ ಕೆಡವಿದ್ದಾರೆ, ಎಂಬುದಕ್ಕೆ ರೆಕಾರ್ಡ್ಸ್ ಇವೆ. ಕೋರ್ಟಿಗೆ ಹೋಗಬೇಕು ಎನ್ನುವುದಾದರೆ ಆ ವಾದವೇ ಬೇರೆ, ಮಾನ್ಯ ಮಂತ್ರಿಯವರು ವಕೀಲರಾಗಿರುವುದರಿಂದ ತಡೆಯಾಜ್ಞೆ ತಂದಿದ್ದಾರೆ, ಇದು ಚರ್ಚೆಯಾಗತಕ್ಕ ವಿಷಯವಾಗಿದ್ದು, ಸಾಕಷ್ಟು ವಿವರಗಳು ಇರುವುದರಿಂದ ಇದರ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು. ಇದು ಒಬ್ಬ ಹರಿಜನ ವ್ಯಕ್ತಿಯ ಮನೆಯನ್ನು ಕೆಡವಿದ್ದಾರೆ ಎಂಬುದು ಅಷ್ಟೇ

ಅಲ್ಲ ; ಅವನ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಎಂದು ಹೇಳಿದರೆ ಅದನ್ನು ಮಾನ್ಯ ಮಂತ್ರಿಯವರು ಇಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ಸದನದಲ್ಲಿ ಚರ್ಚೆಯಾಗುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಶಿವನಂಜಪ್ಪ.—ಸ್ವಾಮಿ, ಒಂದು ಸಣ್ಣ ಸ್ಪಷ್ಟೀಕರಣ ಕಾನೂನು ಬಗ್ಗೆ ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳಿದ್ದಾರೆ.....

ಅಧ್ಯಕ್ಷರು.—ತಾವು ಸೂಚನೆಯನ್ನು ಮಂಡಿಸುವುದಕ್ಕೆ ನಾನು ಅವಕಾಶ ಕೊಟ್ಟಮೇಲೆ ತಾವು ಸ್ಪಷ್ಟೀಕರಣ ಕೇಳುವುದು ಸರಿ. ತಾವು ಸುಮ್ಮನೆ ಗಲಾಟೆ ಮಾಡಿ ಸದನದ ಪ್ರೊಸೀಜರನ್ನು ಬಿಟ್ಟು ಹೋಗುತ್ತಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಈ ನಿಲುವಳಿ ಸೂಚನೆಗೆ ನಾನೂ ಕೂಡ ರುಜು ಹಾಕಿದ್ದೇನೆ. ಆದರೆ ಇದನ್ನು ಸಭೆಯಲ್ಲಿ ತೆಗೆದುಕೊಳ್ಳುವುದಕ್ಕೆ ತಾವು ಸಮ್ಮತಿಯನ್ನು ಕೊಟ್ಟಿಲ್ಲವೆಂದು ಮಾನ್ಯ ಮಂತ್ರಿಗಳು ವಿವರಣೆ ಕೊಟ್ಟಿದ್ದಾರೆ. ಸ್ವಾಮಿ, ಇಲ್ಲಿ ಒಂದು ವಿಷಯವನ್ನು ತಮ್ಮ ಅನುಮತಿಯನ್ನು ಪಡೆದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ಮಂತ್ರಿಯವರು ಕಾನೂನನ್ನು ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯಿಸುವಂತೆ ನೋಡಿಕೊಳ್ಳುತ್ತಿದ್ದೇವೆಯೆಂದು ವಿವರಣೆ ಕೊಟ್ಟಿದ್ದಾರೆ ಒಬ್ಬ ಹರಿಜನ ಆಗಿರಲಿ, ಗಿರಿಜನ ಆಗಿರಲಿ, ಸವರ್ಣಿಯ ಆಗಿರಲಿ, ಎಲ್ಲರಿಗೂ ಕಾನೂನು ಒಂದೇ ರೀತಿ ಇರಬೇಕು. ಇಲ್ಲಿ ಯಾವ ವಿಕ್ಟಂ ಇದ್ದಾನೆ. ಈತ ಕಳೆದ ಸುಮಾರು ೧೦ ವರ್ಷಗಳಿಂದ ಕಲ್ಲು ಕೆಲಸ ಮಾಡಿಕೊಂಡು ಅಲ್ಲೇ ವಾಸಮಾಡುತ್ತಿದ್ದಾನೆ. ಇವತ್ತು ಆತನ ಮನೆಯನ್ನು ಕೆಡವಿದ್ದಾರೆ. ಈ ಕಾನೂನನ್ನು ಜಾರಿಗೆ ತರಬೇಕೆಂಬ ಜವಾಬ್ದಾರಿ ಚುನಾವಣೆ ಆದಮೇಲೆ ಈ ಸರ್ಕಾರಕ್ಕೆ ಗೊತ್ತಾಯಿತೆ? ಈ ನತದೃಷ್ಟ ವ್ಯಕ್ತಿಯ ಮೇಲೆ ಈ ಕಾನೂನನ್ನು ಉಪಯೋಗಿಸಬೇಕೆಂದು ಸರ್ಕಾರಕ್ಕೆ ಯಾವಾಗ ಗೊತ್ತಾಯಿತು ? ನಿಯಮಾವಳಿ ಪ್ರಕಾರ ಇಲ್ಲಿ ಕಾಗದ ಪತ್ರಗಳನ್ನು ಇಡಬಾರದೆಂದು ತಾವು ಹೇಳಿದ್ದೀರಿ. ತಾವು ಕೊಟ್ಟ ರೂಲಿಂಗನ್ನು ನಾವು ಶಿರಸಾವಹಿಸಿ ಒಪ್ಪಿಕೊಳ್ಳುತ್ತೇವೆ. ತಾವು ಪರವಾನಗಿ ಕೊಟ್ಟಮೇಲೆ ನಮ್ಮ ಅಡ್ಜರ್ನ್‌ಮೆಂಟ್ ಮೋಷನ್‌ನ್ನು ನಮ್ಮ ಟೇಬಲ್ ಮೇಲೆ ಇಡಬಹುದು. ಈ ವ್ಯಕ್ತಿ ಸರ್ಕಾರಕ್ಕೆ ಅರ್ಜಿ ಕೊಟ್ಟಮೇಲೆ, ಈತನಿಗೆ ಜಮೀನು ಕೊಡಬಹುದೆಂದು ಸರ್ಕಾರ ಒಂದು ಟಿಪ್ಪಣಿ ಬರೆದಿದೆ. ನಮ್ಮ ವಿಧಾನಸೌಧದ ಕಾರ್ಯಾಲಯದಿಂದ ಒಂದು ಕಾಗದ ಕೂಡ ಅವನಿಗೆ ಹೋಗಿದೆ. ಇದನ್ನು ತಾವು ಮಾಡಿಸದೇ ಇರಬಹುದು ; ಆದರೆ ತಮ್ಮ ಕೈ ಕೆಳಗಿನ ಅಧಿಕಾರಿಗಳು ಮಾಡಿರಬಹುದು. ಆತನು ಚುನಾವಣೆಯಲ್ಲಿ ತಮ್ಮ ವಿರುದ್ಧವಾಗಿ ಕೆಲಸ ಮಾಡಿದ್ದಾನೆಂದು ೧೦ ವರ್ಷಗಳಿಂದ ಅಲ್ಲೇ ಇದ್ದ ಆ ವ್ಯಕ್ತಿಯನ್ನು ಸರ್ಕಾರ ಈ ರೀತಿ ಪೂಡಿದೆ ಎಂಬುದನ್ನು ಇದು ಸ್ಪಷ್ಟೀಕರಿಸುತ್ತದೆ. ಮಾನ್ಯ ಬಸವಲಿಂಗಪ್ಪನವರನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ. ತಮಗೆ ಅಧಿಕಾರ ಇದೆ. ಆದರೆ ಅಧಿಕಾರ ಇದೆಯೆಂದು ತಮ್ಮ ಮನಸ್ಸಿಗೆ ಬಂದಂತೆ ನಡೆಯುವುದಾದರೆ, ಕಾನೂನು ಪಾಲನೆ ಸರಿಯಾಗಿ ಮಾಡದೇ ಹೋದರೆ ಅದನ್ನು ಕೇಳತಕ್ಕ ಅಧಿಕಾರ ನಮಗೂ ಇದೆ ಎಂಬುದನ್ನು ತಾವು ತಿಳಿದುಕೊಳ್ಳಬೇಕು, ಇವತ್ತು ಈ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಪರವಾನಗಿ ಕೊಡದೇ ಹೋದರೆ ಅದು ತಪ್ಪಾಗುತ್ತದೆ. ಕಳೆದ ೧೦ ವರ್ಷಗಳಿಂದ ಆಗದೇ ಇದ್ದ ಪ್ರಕರಣ ಈಗ ಆಗುವುದಕ್ಕೆ ಕಾರಣ ಏನು ? ಕೆಲವು ಸ್ಥಳೀಯ ಪ್ರಭಾವೀ ಶಕ್ತಿಗಳು ಸ್ಥಳೀಯ ಅಧಿಕಾರಿಗಳ ಮೇಲೆ ತಮ್ಮ ಪ್ರಭಾವ ಬೀರಿ ಈ ಕೆಲಸವನ್ನು ಮಾಡಿದ್ದಾರೆ. ಆತ ೧೦ × ೨೦ ಅಡಿ ಜಾಗದಲ್ಲಿ ಕಲ್ಲು ಚಪ್ಪಡಿಗಳನ್ನು ಜೋಡಿಸಿ ಮನೆ ಕಟ್ಟಿಕೊಂಡಿದ್ದ ಎಂಬುದು ಫೋಟೋ ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಅವನೇನೂ ವಿಧಾನಸೌಧವನ್ನು ಕಟ್ಟಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈ ರಿಪೋರ್ಟ್ ಪ್ರಕಾರ ಆತ ಒನೇ ಮನೆಯನ್ನು ಕಟ್ಟಿದ್ದಾನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸ್ವಾಮಿ, ಅಲ್ಲಿ ಏನು ನಡೆದಿದೆ ಅದನ್ನು ಸಭೆಯ ಮುಂದಿಡುವುದಕ್ಕೆ ತಮ್ಮ ಅನುಮತಿ ಬೇಕಾಗಿದೆ. ಆ ಮನೆ ಕಟ್ಟುವುದಕ್ಕೆ ಯಾರು ಪರ್ಮಿಷನ್ ಕೊಟ್ಟಿದ್ದಾರೆ, ಅದನ್ನು ಯಾವಾಗ ಕಟ್ಟಿದೆ ಮುಂತಾದ್ದಕ್ಕೆಲ್ಲಾ ದಾಖಲಾತಿಗಳಿವೆ. ಇದೊಂದು ಪ್ರಮುಖ ವಾದ ಪ್ರಶ್ನೆಯಾಗಿರುವುದರಿಂದ ಇದನ್ನು ಸಭೆಯ ಮುಂದಿಡುವುದಕ್ಕೆ ತಾವು ತಮ್ಮ ಅನುಮತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. Otherwise, the connected documents cannot be placed before this House.

ಶ್ರೀ ಎಂ. ಸಿ. ನಾನಯ್ಯ.— ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರವರು ನಿಲುವಳಿ ಸೂಚನೆ ಬಗ್ಗೆ ಮಾತನಾಡಿದರು. ನಾನು admissibility of the motion ಬಗ್ಗೆ ಮಾತನಾಡ ಬೇಕಾಗಿದೆ.

ಶ್ರೀ ಮಳ್ಳೂರು ಆನಂದರಾವ್.— ಸ್ವಾಮಿ, ನನ್ನದೊಂದು ಕ್ರಿಯಾಲೋಪ. ನಿಲುವಳಿ ಸೂಚನೆಗೆ ಯಾರು ಸಹಿಹಾಕಿದ್ದಾರೆ ಅವರಿಗೆ ಮಾತ್ರ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೆ ಕೊಟ್ಟಿದ್ದೀರಿ. ನನ್ನ ಪ್ರಶ್ನೆ ಇಷ್ಟೆ. ಇಲ್ಲಿ ಸುಮಾರು ೧೦ ಜನ ಸಹಿ ಹಾಕಿ ಕೊಟ್ಟಿದ್ದೇವೆ ಅದರಲ್ಲಿ ನನಗೂ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿರಿ ಅದಕ್ಕಾಗಿ ತಮಗೆ ಧನ್ಯವಾದ, ಮಂತ್ರಿಗಳವರೂ ಉತ್ತರ ಕೊಟ್ಟರು. ಅದರ ಮೇಲೆ ಒಂದೆರಡು ಸ್ಪಷ್ಟೀಕರಣ ಕೇಳಿದ್ದೇವೆ. ಆದರೆ ಅವರಿಗೆ ಈಗ ಈ ವಿಷಯದ ಬಗ್ಗೆ ಪ್ರಶ್ನೆ ಕೇಳಲು ಅವಕಾಶವಿದೆಯೇ ?

೪-೦೦ ಪಿ. ಎಂ.

ಅಧ್ಯಕ್ಷರು.— ನಿಲುವಳಿ ಸೂಚನೆ ಬಗ್ಗೆ ಬೇರೆಯವರು ಮಾತನಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ಮಳ್ಳೂರು ಆನಂದರಾವ್.— ಅವರೂ ನಮ್ಮ ಜೊತೆಯಲ್ಲಿ ನಿಲುವಳಿ ಸೂಚನೆಗೆ ಸಹಿ ಹಾಕಿದ್ದರೆ ಅವಕಾಶ ಕೊಡಿ, ಅದಕ್ಕೆ ನಮ್ಮ ಆಭ್ಯಂತರವಿಲ್ಲ.

ಅಧ್ಯಕ್ಷರು.— ಇದರ ಮೇಲೆಯೇ ಇವತ್ತು ಚರ್ಚೆ ಆಗಬೇಕೆಂದು ಈ ಸಭೆ ಅಭಿಪ್ರಾಯ ಪಡುವುದಾದರೆ ಹಾಗೆಯೇ ಆಗಲೀ ಆದರೆ ರಾಜ್ಯಪಾಲರ ಭಾಷಣಕ್ಕೆ ಧನ್ಯವಾದವನ್ನು ಅರ್ಪಿಸುವ ವಿಷಯ ಬೇರೆ ನಾವು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಇವತ್ತು ಏನಾಗುತ್ತಿದೆಯೆಂದರೆ, ಈ ಸಭೆ ಪ್ರಾರಂಭವಾದಾಗಿನಿಂದ ಇಂದಿನವರೆಗೆ ಅನೇಕ ಅನ್ಯಾಯಗಳು ಆಗುತ್ತಿರುವುದರ ಬಗ್ಗೆ ನಮಗೆ ಅನೇಕ ದೂರುಗಳು ಬಂದಿವೆ, ಅನೇಕ ಮನವಿಗಳು, ಟೆಲಿಗ್ರಾಂಗಳೂ ಕೂಡ ಬಂದಿವೆ, ಅದರ ಬಗ್ಗೆ ಚರ್ಚೆ ಮಾಡಿದ್ದೇವೆ. ನಿನ್ನೆಯ ದಿವಸ ಒಂದು ವಿಚಾರವನ್ನು ಎತ್ತಿದ್ದೆವು. ಒಬ್ಬ ಹರಿಜನ ಹೆಣ್ಣು ಮಗಳ ಕೊಲೆಯಾಯಿತು ಅದಕ್ಕೆ ಮಾನ್ಯಮಂತ್ರಿಗಳವರು ಹೇಳಿಕೆ ಕೊಟ್ಟರು,ಅದರ ಬಗ್ಗೆ ಇನ್‌ವೆಸ್ಟಿಗೇಷನ್‌ನಡೆಯುತ್ತಿದೆಯೆಂದು ಆ ಹೆಣ್ಣು ಮಗಳಿಗೆ ಸಂಬಂಧಪಟ್ಟ ತಂದೆತಾಯಿ ಅಣ್ಣ ತಮ್ಮಂದಿರು ಹೊರಗಡೆ ಬಂದು ಕಂಳಿತುಕೊಂಡಿದ್ದಾರೆ. ಆ ಡಾಕ್ಟರ್ ಮಂತ್ರಿಗಳವರಿಗೆ ಸಂಭಂಧಿಕರು ಆದುದರಿಂದ ಆ ವಿಷಯವನ್ನು ಮುಚ್ಚಿಡುತ್ತಿದ್ದಾರೆಂದು ಅವರ ಮನೆಯವರು ಹೇಳುತ್ತಿದ್ದಾರೆ. ಅವರನ್ನು ಈಗತಾನೆ ಹೊರಗಡೆ ಕೂಡಿಸಿ ಬಂದಿದ್ದೇನೆ. ಮತ್ತೆ ಮಾನ್ಯ ಶ್ರೀಮತಿ ಪ್ರಮೀಳಾ ಎತ್ತಿದ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳವರು, ಅವರಿಬ್ಬರೂ ಸತ್ತು ಹೋಗಿದ್ದಾರೆಂದು ಹೇಳಿದರು. ಡಾಕ್ಟರ್ ವಿಚಾರ ಹೇಳಿದಾಗ ಮಾನ್ಯ ಆರೋಗ್ಯ ಮಂತ್ರಿಗಳವರು ಡಾಕ್ಟರ್‌ರವರು ಸತ್ತುಹೋಗಿದ್ದಾರೆಂದು ತಿಳಿಸಿದ್ದಾರೆಂದು ಹೇಳಿದರು. ಇವತ್ತು ಅಡ್ಜರ್ನ್‌ಮೆಂಟ್ ತರುವುದಕ್ಕೆ ಅಷ್ಟು ಮಹತ್ವವಿದೆ. ಇವತ್ತು ಒಬ್ಬ ನಾಗರೀಕನ ಹಕ್ಕು ಬಾಧ್ಯತೆಗೆ ಚ್ಯುತಿ ಬಂದಾಗ ಅಷ್ಟು ಮಹತ್ವವನ್ನು ಕೊಡಬೇಕಾಗುತ್ತದೆ. ಒಬ್ಬ ಪುಸುಷ್ಯ ೧೦ ವರ್ಷದಿಂದ ಇದ್ದಂಥ ಮನೆಯನ್ನು ಕಾನೂನಿಗೆವಿರುದ್ಧವಾಗಿ ಕೆಡವಿಸಿ ಹಾಕಿಸಿದ್ದಾರೆ. ಇವತ್ತು ಅವನ ಕುಟುಂಬದವರು ನಿರ್ಗತಿಕರಾಗಿದ್ದಾರೆ. ಇದು ಗಹನವಾದ ವಿಚಾರ. ಒಬ್ಬ ವ್ಯಕ್ತಿಗೆ ಸಂಬಂಧಪಟ್ಟಿದು ಎಂದು ಅಲಕ್ಷ್ಯ ಪಡುವ ಹಾಗಿಲ್ಲ. ಇವತ್ತು ಒಬ್ಬನಿಗೆ ಆದರೆ ನಾಳೆ ಮತ್ತೊಬ್ಬರಿಗೆ ಆಗುತ್ತದೆ. ಕಾನೂನು ಪಾಲನೆ ಸರಿಯಾಗಿ ಆಗದೇ ಹೋದರೆ ರಾಜ್ಯದಲ್ಲಿ ಅಶಾಂತಿಯಾಗುತ್ತದೆ. ದಯವಿಟ್ಟು ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.— ಆಯಿತು, ಎಷ್ಟು ಸಾರಿ ಹೇಳಿದ್ದಿರಲ್ಲಾ ?

ಶ್ರೀ ಎಸ್. ಆರ್. ಬೊಮ್ಮಾಯಿ.— ದಿನಾ ಇದೇ ರೀತಿ ಆಗುತ್ತಾ ಇರುವುದರಿಂದ ಅದರ ಬಗ್ಗೆ ಚರ್ಚೆಯಾಗಿ ಬಿಡಲಿ.

ಶ್ರೀ ಎಂ. ಸಿ. ನಾನಯ್ಯ.— ಮಾನ್ಯ ಅಧಕ್ಷರೇ ಇದರಲ್ಲಿ ಅಡಗಿರತಕ್ಕಂಥ ಒಂದು ವಿಷಯ. Whether the motion raised by the Leader of the Opposition with about ten signatures is a matter of public importance has to be decided. Rule 50 specifically lays down that a matter of public importance should be raised. Here the motion that has been raised by

Sri Ramakrishna relates to an incident relating to one single individual. I want to know the definition of the word 'public'. When action has been taken concerning to the entire community of the people, then it is a matter of public importance. How can action against one particular individual in accordance with Law become a matter of public importance ?

SRI S. R. BOMMAI.— Is it not of public importance when an individual is shot ?

SRI M. C. NANAIAH.— I am fully conscious of what I am speaking. The executive has to implement the law enacted by us. We have to act in accordance with Law.

ಶ್ರೀ ಮಳ್ಳೂರು ಆನಂದರಾವ್.— ಲಾ ಯಾರು ಬ್ರೇಕ್ ಮಾಡಿದ್ದಾರೆ ? ಕೊಡಗಿನ ವಿಷಯ ಪೇಳಿ.....

SRI M. C. NANAIAH.— We have to decide whether it is a matter of public importance. ನಾನು ಈ ತರಹದ ನೂರಾರು ಕೇಸ್‌ಗಳನ್ನು ಕೋಟ್ ಮಾಡಿ ಹೇಳಬಹುದು ಆದರೆ ಈಗ ಕಾಲಾವಕಾಶ ಇಲ್ಲ. But here the motion that has been raised by Mr. Ramakrishna relates to a demolition of a house relating to one particular individual.

SRI S. R. BOMMAI.— He was a candidate.

SRI M. C. NANAIAH.— I do not know whether he was a candidate or not.

(Sri Mallur Ananda Rao and some other Opposition Members tried to interrupt the speaker).

SRI M. C. SANAIAH.— I request the hon. Members to bear with me. The Leader of the Opposition said that it relates to a person who stood as a candidate for the election. Whether he was a candidate or not, he is a citizen of this country. That is more important. The action of the Government relating to one single individual can it be a matter of public importance ? When it relates to the entire community in the village, then, it is a matter of public importance. When it is something which relates only to one single individual, then does it become a matter of public importance.

ಅಧ್ಯಕ್ಷರು.— ವಾದಗಳ ವಿಚಾರ ಬೇಕಾಗಿಲ್ಲ. ಈಗಲೇ ಸಾಕಷ್ಟು ಚರ್ಚೆಯಾಗಿದೆ. ಆ ವಿಷಯ ಅಲ್ಲಿಗೆ ಮುಕ್ತಾಯ ಮಾಡಿ.

SRI M. C. NANAIAH.— Therefore, the consent of the speaker need not be given.

(Sri Michael Fernandez stood up to speak)

ಅಧ್ಯಕ್ಷರು.— ವಿರೋಧ ಪಕ್ಷದವರಿಗೆ ನಾನು ಎಷ್ಟು ಅವಕಾಶ ಮಾಡಿಕೊಡುತ್ತಿದ್ದೇನೆ ಆದರೂ ಕೂಡ ನೀವು ಪತಕ್ಕೆ ಮಧ್ಯೆ ಮಧ್ಯೆ ಎದ್ದುನಿಂತುಕೊಂಡು ಮಾತನಾಡುತ್ತೀರಿ ?

SRI MICHAEL FERNANDES.—Sir, it is a definite matter of urgent public importance. When the Government which has to uphold the law breaks that law in respect of one citizen, or one thousand citizens, it will definitely become a matter of urgent public importance.

SRI S. BANGARAPPA.—Supposing the action taken by the Government goes in the interest of the public...

SRI MICHAEL FERNANDES.—It should be according to law. You cannot sue me.....According to law, you have to take action.....

SRI MALLIKARJUNA KHARGE.—We are very eager to know whether the Chair has given the consent or not...

MR. SPEAKER.—I have not given the consent...

SRI MALLIKARJUNA KHARGE.—Then the matter should be closed...

† SRI C. M. ARMUGAM (K. G. F.).—We have been hearing the points raised under the adjournment motion from both the sides. My assessment is that the entire House is in favour of protecting the SC people of Karnataka. I think my assessment is cent per cent correct. I think objection has been raised about the form or the method under which this issue has been brought before the House. If there is an Adjournment Motion from the Opposition Member, naturally, the Government side objects. The issue before us is relating to the dismantling of a house belonging to a citizen-may be he is a scheduled caste man. The allegation made by my hon. Friend was that the house was dismantled on the instructions of the Minister who belongs to Scheduled Caste; Secondly, he belongs to the Janatha Party and thirdly, he was a candidate-never contested, might be-of the last General Election. Whether the Minister knows it or not is a different matter because when I contested, there were one dozen candidates and I was not even able to know some of their names. Any way, that is a different matter. Now, The Hon. Minister has stated that he would take action. If he belongs to a Scheduled Caste, there is some concession which he enjoyed under law. If he has occupied the Government land for a specific period, he will be protected. Without making out a case for the adjournment motion, they have brought this matter. Excepting Mr. Bommai and Mr. Puttaswamy, it is very difficult for some of us to understand its relevancy, admissibility etc., Now, we know the entire history of this case. He has constructed the House and it was dismantled. He was keeping the house for the last ten years. He had a licence for it, and he has paid the ground rent also. I always consider

Sri Basavalingappa as a leader among the Scheduled Castes. May be he is a Revenue Minister. That is different. Because this has happened under his portfolio, the entire opposition is agitating to redress the grievance. The form may be different, the presentation may be different. I therefore appeal to the Hon. Minister to make a statement. They could have brought it under Calling Attention or under Rule 312, or they could have mentioned it during the course of the discussion on the Motion of Thanks to the Governor's Address. But, somehow they could not do it. Now, they have brought it under an Adjournment Motion. It is left to the Chair to allow or disallow this Adjournment Motion. But, I appeal to the Hon. Revenue Minister to look into these details and atleast make a statement in this regard. They have made a wild allegation that the Minister has instructed to do it. It was shocking to me. Therefore, I request the Hon. Revenue Minister to come out with a detailed statement so that the House will know about these things correctly.

ಶ್ರೀ ವೈ. ರಾಮಕೃಷ್ಣ.—ಆದರ ತೀವ್ರತೆ ಏನು ಇದೆ ಎನ್ನುವುದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಬೇಗನೆ ನಿಮ್ಮ ಭಾಷಣವನ್ನು ಮುಗಿಸಿರಿ ;

ಶ್ರೀ ಎಸ್. ಆರ್. ಬೊಮ್ಮಾಯಿ.—ನಾವು ಇಲ್ಲಿ ವಾದ ಮಾಡಬೇಕಾದರೆ ಕಾರಣವಿಷ್ಟೆ ? ಶ್ರೀ ದೇವೇಗೌಡರು ವಿವರಗಳನ್ನು ಕೊಟ್ಟಿಲ್ಲ. ಶ್ರೀ ವೈ. ರಾಮಕೃಷ್ಣರವರು ವಿವರವಾಗಿ ಎಲ್ಲವನ್ನು ಹೇಳಿದ್ದಾರೆ. He has stated how illegally it has been demolished. ನಾನು ವಿವರ ಕೊಡುವುದಕ್ಕೆ ಹೋಗಿಲ್ಲ. ದಯವಿಟ್ಟು ಇನ್ನೊಮ್ಮೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಬ್ಬ ಪರಿಜನ ವರ್ಗಕ್ಕೆ ಸೇರಿದವನ ಮನೆಯನ್ನು ಕೆಡವಿದ್ದಾರೆ. ಇದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳಬಾರದು. ಈ ರೀತಿ ಪುನಃ ರಾಜ್ಯದಲ್ಲಿ ಆಗಬಾರದೆಂದು ಹೇಳುತ್ತೇನೆ.

SRI B. BASAVALINGAPPA.—Please give a notice of calling attention. I will answer...

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ತಮ್ಮ ನಿರ್ಣಯಕ್ಕೆ ತಲೆಬಾಗುತ್ತೇವೆ. ಆದರೆ ನನಗೆ ಆಶ್ಚರ್ಯವಾಗುತ್ತದೆ. ಶ್ರೀಮಾನ್ ಆರ್ಮುಗಮ್‌ರವರು ಹೇಳಿದಮೇಲೆ ನಮ್ಮ ಕಂದಾಯ ಮಂತ್ರಿಗಳು ನ್ಯಾಯವಾಗಿ ಇದನ್ನು ವಿಚಾರಣೆ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ ಕಾರಣ ನಾವು ಪ್ರತಿಭಟನೆಯನ್ನು ಮಾಡಿ ಸಭಾತ್ಯಾಗವನ್ನು ಮಾಡುತ್ತೇವೆ.

(ಸಿ.ಪಿ.ಐ. ಮತ್ತು ರಿಪಬ್ಲಿಕನ್ ಪಕ್ಷದ ಆರ್ಮುಗಮ್, ಒಬ್ಬ ಪಕ್ಷೇತರರನ್ನು ಬಿಟ್ಟು ಉಳಿದ ಎಲ್ಲ ವಿರೋಧಪಕ್ಷದ ಸದಸ್ಯರು ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡಿದರು)

Mr. SPEAKER.—Sri Y. Ramakrishna and ten other members have given notice of an adjournment motion seeking the permission to discuss the demolition of the house belonging to the Harijan in Yelahanka on 18th March 1978 under instructions from the Minister for Revenue. I find that this matter refers to in individual by name Marappa. Further, the incident is stated to have occured on 18th March 1978. This House is sitting from 17th March 1978. This matter could have been raised earlier by the members and the

person referred to in the motion may seek redress in the competent forum. In view of these circumstances, I withhold my consent to the Adjournment Motion.

SRI C. M. ARUMUGAM.—Sir, the Hon. Minister for Revenue is here. He can make a statement.

SRI B. BASAVALINGAPPA.—Sir, Mr. Arumugam was not here when I made a statement. This is a action on a person who was a landlord having two houses in the locality. He wanted to construct another building to run a Hotel. The Law irrespective of caste, It must take its own course.

Motion of Thanks on the Governor's Address (Debate Continued)

MR. SPEAKER.— Now let us take up the discussion on the Governor's Address. ಮಾನ್ಯ ಕಕ್ಕಿಲಾಯ ಅವರೇ ತಾವು ಮಾತನಾಡಿ.

ಶ್ರೀ ಬಿ. ವಿ. ಕಕ್ಕಿಲಾಯ.—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ...

SRI BHIMANNA KHANDRE.—Sir, I have not completed my speech on the Governor's Address.

MR. SPEAKER.—You have spoken for 45 minutes. At least I hav to give 10 minutes to others.

SRI BHIMANNA KHANDRE.—I am requesting you to give me an opportunity to speak on the Governor's Address.

MR. SPEAKER.—I want to know how many minutes you require ?

SRI BHIMANNA KHANDRE.—You please give me 15 minutes. ಏಕೆಂದರೆ ನಾನು ಮಾತನಾಡುವಾಗ ಬೇಕಾದಷ್ಟು ಇಂಟರಪ್ಷನ್ ಆಯಿತು.

MR. SPEAKER.—I am permitting you to speak on the subject for 5 minutes.

† ಶ್ರೀ ಭೀಮಣ್ಣ ಖಂಡ್ರೆ(ಭಾಲ್ಕಿ).—ಮಾನ್ಯ ಸಿ.ಪಿ.ಐ. ಮೆಂಬರ್‌ರವರು ಲ್ಯಾಂಡ್ ಟ್ರಿಬ್ಯುನಲ್ ಬಗ್ಗೆ ಹೇಳುತ್ತಿದ್ದರು. ನಮ್ಮ ಮಾನ್ಯ ಸ್ನೇಹಿತರುಗಳೆಲ್ಲಾ ಗೌರ್ನರ್ ಕಾಲಕ್ಕೆ ಟ್ರಿಬ್ಯುನಲ್‌ನಲ್ಲಿ ಕೆಲಸ ಮಾಡುವುದಕ್ಕೆ ಯಾರೂ ಬೇಡ ಎಂದವರು ಈಗ ಅವರು ಅದಕ್ಕಾಗಿ ಬೇಡುತ್ತಿದ್ದಾರೆ. ನಾನಾದರೂ ಅಪ್ಲೋಜಿಷನ್ ಮೆಂಬರ್ ಆಗಿ, ಟ್ರಿಬ್ಯುನಲ್ ಮೆಂಬರ್ ಆಗಿ ಕೆಲಸ ಮಾಡುವುದಕ್ಕೆ ನನಗೆ ಇಚೆ ಇಲ್ಲ. ಈ ಟ್ರಿಬ್ಯುನಲ್‌ನಲ್ಲಿರುವ ಮೆಂಬರ್‌ಗಳ ಬಗ್ಗೆ ಹೇಳಬೇಕೆಂದರೆ ಅವರು ತಕ್ಕಡಿ ಹಚ್ಚಿ ಜಡ್ಜ್‌ಮೆಂಟ್ ಮಾಡುವಾಗ ೧೦೦೦, ೨೦೦೦, ೩೦೦೦ ರೂಪಾಯಿಗಳನ್ನು ಒಂದು ಕೇಸಿಗೆ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಅಲ್ಲೆಲ್ಲಾ ಬಹಳ ಕರೆಪ್ಟ್ ಜನರೇ ಇದ್ದಾರೆ. ನಾವು ಈ ಬಗ್ಗೆ ಆಗಿಂದಾಗೆ ಸರ್ಕಾರದ